ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನಿಂದ, ಈ ಪುಸ್ತಕದ ಆಧಾರದ ಮೇಲೆ ಸಾಲವನ್ನು ತೆಗೆದು ಕೊಳ್ಳುತಕ್ಕಂಥ ವ್ಯವಸ್ಥೆ ಇದೆ. ಇದರಿಂದ ಸುಲಭವಾಗಿ ಟೈಟಲ್ ಡೀಡ್ ಸಿಗುತ್ತದೆ. ಆದುದರಿಂದ ಇದಕ್ಕೆ ಒಪ್ಪಿಗೆ ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ರೆವಿನ್ಯೂ ಇಸವಿಯ ಕರ್ನಾಟಕ ಕೃಷಿ ಸಾಲ ಪಾಸ್ ಪುಸ್ತಕ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ರಿಂದ ೪ರ ವರೆಗೆ

ಅಧ್ಯಕ್ಷರು. ''ಖಂಡ ೨ ರಿಂದ ೪ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ''.

ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೪ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ ೧ ಇತ್ಯಾದಿ :

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸ ವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ. ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಪೂರೈಕೆ ಹಾಗೂ ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ರೆವಿನ್ಯೂ ಇಸವಿಯ ಕರ್ನಾಟಕ ಕೃಷಿ ಸಾಲ ಪಾಸ್ ಪುಸ್ತಕ (ತಿದ್ದುಪಡಿ) ವಿಧೇಯಕವನ್ನು ಮಾನ್ಯ ಸಭೆಯು ಅಂಗೀಕರಿಸಬೇಕೆಂದು, ಮಾನ್ಯ ರೆವಿನ್ಯೂ ಮಂತ್ರಿಗಳ ಪರವಾಗಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ರೆವಿನ್ಯೂ ಇಸವಿಯ ಕರ್ನಾಟಕ ಕೃಷಿ ಸಾಲ ಪಾಸ್ ಪುಸ್ತಕ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

DISCUSSION ON A MATTER OF URGENT PUBLIC IMPORTANCE FOR SHORT DURATION.

Further discussion regarding unilateral decision of Government in the matter of delimiting the constituencies of Zilla Parishads and Mandal Panchayats and in reserving Mandal Panchayat Constituencies without taking the Opposition Parties into confidence.

ಅಧ್ಯಕ್ಷರು —ಈಗ ಜಿಲ್ಲಾ ಪರಿಷತ್ ಡಿಲಿಮಿಟೇಷನ್ ವಿಚಾರದಲ್ಲಿ ಮುಂದುವರಿದ ಚರ್ಚೆ.

ಶ್ರೀ ಹೆಚ್.ಡಿ ಚೌಡಯ್ಯ.—ಸಂಬಂಧಪಟ್ಟ ಮಂತ್ರಿಗಳೇ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು).—ಅವರು ಮೇಲ್ಮನೆಯಲ್ಲಿದ್ದಾರೆ, ನಾನು ಅಲ್ಲಿಗೆ ಹೋಗಿ ಅವರನ್ನು ಕಳುಹಿಸುತ್ತೇನೆ.

ಅಧ್ಯಕ್ಷರು.—ಇದರ ಬಗ್ಗೆ ಇಷ್ಟು ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಶ್ರೀಯುತರಾದ ಚೌಡಯ್ಯ, ಧರ್ಮಸಿಂಗ್, ಶಾಣಪ್ಪ, ಮಹಮ್ಮದ್ ಲೈಕುದ್ದೀನ್, ಭೂಪತಿ, ಮಲ್ಲಿಕಾರ್ಜುನ ಖರ್ಗೆ, ಪ್ರತಾಪಚಂದ್ರಶೆಟ್ಟಿ, ಎಂ. ಪಿ. ಪ್ರಕಾಶ್, ಕೆ. ಹೆಚ್. ಪಾಟೀಲ್, ಬಿ. ಲಕ್ಕಪ್ಪ, ಮತ್ತು ಎಂ. ವೀರಪ್ಪಮೊಯಿಲಿ.

ಶ್ರೀ ಬಿ. ಬಸವಲಿಂಗಪ್ಪ.—ಅಜೆಂಡಾದ ಪ್ರಕಾರ, ಇನ್ನೂ ಕರ್ನಾಟಕ ಬಾಡಿಗೆ ನಿಯಂತ್ರಣ ವಿಧೇಯಕ ಇದೆ, ಕರ್ನಾಟಕ ಭೂ ಕಂದಾಯ ತಿದ್ದುಪಡಿ ವಿಧೇಯಕ ಇದೆ, ಅದನ್ನು ನಾಳೆ ತೆಗೆದು ಕೊಳ್ಳುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಅವೆಲ್ಲಾ ಮುಂದಕ್ಕೆ ಹೋಗಿರುತ್ತವೆ.

ಅಧ್ಯಕ್ಷರು.—ಅವುಗಳನ್ನು ಆಮೇಲೆ ತೆಗೆದುಕೊಳ್ಳೋಣ. ರೆಂಟ್ ಕಂಟ್ರೋಲ್‌ದು ನಾಳೆ ತೆಗೆದುಕೊಳ್ಳೋಣ.

ಶ್ರೀ ವಂಲ್ಲಾರಿಗೌಡ ಎಸ್. ಪಾಟೀಲ್.—ಈ ಸದನ ಇನ್ನೂ ಎಷ್ಟು ಗಂಟೆಯವರೆಗೆ ಹೋಗುತ್ತದೆ ?

ಅಧ್ಯಕ್ಷರು.—ಏನು ಮಾಡೋಣ ನೀವೇ ಹೇಳಿ .....

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಇವತ್ತಿನದಿವಸ ಇದನ್ನು ಮುಗಿಸಬೇಕು.

ಅಧ್ಯಕ್ಷರು.—ಇವತ್ತಿನ ದಿವಸ ಇದನ್ನು ಮುಗಿಸೋಣ. ಬಿಲ್ ಬೇಕಾದರೆ ನಾಳೆ ತೆಗೆದು ಕೊಳ್ಳೋಣ. ಈಗ ವೆಂಕಟರಾಮಯ್ಯನವರು ಮಾತನಾಡಲಿ.

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಅಧ್ಯಕ್ಷರೇ, ಈ ಮಂಡಲ್ ಪಂಚಾಯಿತ್ ಕ್ಷೇತ್ರಗಳನ್ನು ಡಿವೈಡ್ ಮಾಡಿದಾಗ ನಾನು ಹೇಳಿದೆ, ಇವು ಕ್ಯಾಲಿಕ್ಯುಲೇಟರ್ ಮಂಡಲ್‌ಗಳು ಎಂದು ಯಾರೋ ಒಬ್ಬ ಅಧಿಕಾರಿ ಕಂಳಿತುಕೊಳ್ಳುವುದು, ಕ್ಯಾಲಿಕ್ಯುಲೇಟರ್ ತೆಗೆದುಕೊಳ್ಳುವುದು, ಹಳ್ಳಿಗಳ ಹೆಸರು ಓದುವುದು, ೩೦ ಸಾವಿರ ಜನಸಂಖ್ಯೆ ಆದ ತಕ್ಷಣ ಒಂದು ಗೆರೆ ಎಳೆಯುವುದು, ಈ ರೀತಿ ಮಾಡಿದ್ದಾರೆ. ದುರಾದೃಷ್ಟವಶಾತ್ ನಾನು ಒಂದು ಕಮಿಟಿಗೆ ಹೋಗಿದ್ದೆ. ನಾನು ಬರುವ ವೇಳೆಗೆ ಆಲ್ಲಿದ್ದ ಒಬ್ಬ ವಿಲೇಜ್ ಪಂಚಾಯತ್ ಎಕ್ಸ್‌ಟೆನ್‌ಷನ್ ಆಫೀಸರ್ ಇದನ್ನು ಮಾಡಿ ಬಿಟ್ಟಿದ್ದ. ಅದನ್ನು ಸರಿ ಮಾಡಬೇಕೆಂದು ಹೇಳಿದೆ. ಮಂತ್ರಿಗಳಿಗೂ ಹೇಳಿದೆ. ಡೆಪ್ಯುಟಿ ಕಮಿಷನರ್‌ರವರಿಗೂ ಹೇಳಿದೆ, ಅವರು ಆಗ ಏನು ಹೇಳಿದರು ಎಂದರೆ, ಇದನ್ನು ಮಾಡಿ ಆಗಿ ಹೋಗಿದೆ, ಬದಲಾಯಿಸುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಡಿವಿಜನಲ್ ಕಮಿಷನರ್ ಹತ್ತಿರ ಅಪೀಲ್ ಹೋಗಿದ್ದೆ. ಮಾನ್ಯ ನಜೀರ್ ಸಾಹೇಬರಿಗೂ ಹೇಳಿದೆ. ಈ ವಿಷಯದಲ್ಲಿ ಬಹಳ ಅನ್ಯಾಯ ಆಗಿದೆ, ಒಂದೊಂದು ಹಳ್ಳಿಯಿಂದ ಮಂಡಲ್ ಹೆಡ್‌ಕ್ವಾರ್ಟರ್ಸ್‌ಗೆ ಹೋಗಬೇಕಾದರೆ ೧೩ ಮೈಲಿ ಹೋಗಬೇಕಾಗುತ್ತದೆ, ಒಂದು ಕೂಡಾ ಕಾಂಪ್ಯಾಕ್ಟ್ ಆಗಿ ಆಗಲಿಲ್ಲ ಎಂದು ಹೇಳಿದೆ. ನಮ್ಮಲ್ಲಿ ಒಬ್ಬರು ಡಿವಿಜನಲ್ ಕಮಿಷನರ್ ಇದ್ದರು, ನಾನು ಅವರ ಹೆಸರು ಹೇಳುವುದಿಲ್ಲ, ಅವರಿಗೆ ಕನ್ನಡ ಬರುವುದಿಲ್ಲ, ಇಂಗ್ಲಿಷ್ ಅರ್ಥವಾಗುವುದಿಲ್ಲ. ಒಬ್ಬ ಕ್ಲರ್ಕನ್ನು ಕರೆಯುವುದು, ಮೆಮೋ ಓದು ಎನ್ನುವುದು, ೧೦ ಸಾಲು ಓದಿಸಿದರು, ಅದರಲ್ಲಿ ೧೦ ಸೆಂಟೆನ್ಸ್ ಇತ್ತು. ಆತನು ಓದಿದ್ದೆ, ಓದಿದ್ದೂ ಈತನು ಕೇಳಿದ್ದೂ ಕೇಳಿದ್ದೆ. ಆರ್ಡರ್ಸ್ ಪಾಸ್ ಆಯಿತು. ಅವರು ಮಾಡಿದ್ದು ಏನು ಎಂದರೆ, ವಿಲೇಜ್ ಪಂಚಾಯತ್ ಎಕ್ಸ್‌ಟೆನ್‌ಷನ್ ಆಫೀಸರ್ಸ್ ಎಂದು ಇರುತ್ತಾರೆ, ಸೆಕೆಂಡ್ ಡಿವಿಜನ್ ಕ್ಲರ್ಕ್ ಗ್ರೇಡ್‌ನವನು, ಆತನು ಮಾಡಿದ್ದೇ ಕನ್‌ಫರ್ಮ್ ಆಯಿತು. ಯಾವ ಒಂದು ಸದುದ್ದೇಶ ಇಟ್ಟುಕೊಂಡು ಮಾನ್ಯ ನಜೀರ್‌ಸಾಹೇಬರು ಇದನ್ನು ಮಾಡಿದರೋ ಅದು ಆಗುವುದಿಲ್ಲ. ಒಂದು ಮಂಡಲ್‌ನಿಂದ ಇನ್ನೊಂದು ಮಂಡಲ್‌ಗೆ ೧೩ ಮೈಲಿ ಹೋಗಬೇಕಾಗುತ್ತದೆ. ನಮ್ಮ ತಾಲ್ಲೂಕಿನಲ್ಲಿ ಮೂರು ಮಂಡಲ್‌ಗಳಿಂ ಇವೆ. ಒಂದು ಮಂಡಲ್‌ನಿಂದ ಇನ್ನೊಂದು ಮಂಡಲ್‌ಗೆ ಹೋಗಬೇಕಾದರೆ, ಮಧ್ಯೆ ಬೇರೆ, ಮೂರು ಮಂಡಲ್ ಪಾಸ್ ಮಾಡಿ, ನಾಲ್ಕನೇ ಮಂಡಲ್‌ಗೆ ಹೋಗಬೇಕು. ಇದರ ಬಗ್ಗೆ ನಾನು ಅಡಿಷನಲ್ ಜೀಫ್ ಸೆಕ್ರೆಟರಿ ಹಾಗೂ ಡೆವಲಪ್‌ಮೆಂಟ್ ಕಮಿಷನರ್‌ರವರಿಗೆ ಹೇಳಿದೆ, ಮಾನ್ಯ ಯಾವಗಲ್‌ರವರಿಗೆ ಹೇಳಿದೆ. ಮಾನ್ಯ

ನಜೀರ್‌ಸಾಹೇಬರವರಿಗೆ ಹೇಳಿದೆ ಇವರಿಗೆ ಹೇಳುವುದಕ್ಕಿಂತ ಬಂಡೆಗೆ ಹೇಳುವುದು ಮೇಲು ಎಂದು ಏನು ಅಂದುಕೊಂಡೆ. ಇದು ಗೋಕರ್ಣಲ್ಲ ಮೇಲೆ ನೀರು ಸುರಿದಂತೆ ಎಂದು ನಾನು ತೀರ್ಮಾನ ಮಾಡಿಕೊಂಡೆ. ನನಗೆ ಬೇಜಾರಾಗಿ ಬಿಟ್ಟುಬಿಟ್ಟೆ.

(ಮಾನ್ಯ ಶ್ರೀ ಹೆಚ್.ಜಿ. ಗೋವಿಂದೇಗೌಡರು ಸಭಾಧ್ಯಕ್ಷರ ಪೀಠದಲ್ಲಿ ಕುಳಿತುಕೊಂಡರು).

ನಮ್ಮ ನಜೀರ್ ಸಾಹೇಬರ ಉದ್ದೇಶ ಸಫಲವಾಗಿಲ್ಲ. ಒಂದು ಕಡೆ ಪ್ರತಿಷ್ಠಿತ ವ್ಯಕ್ತಿಗಳ ಆಧಾರದ ಮೇಲೆ ಮಂಡಲಗಳನ್ನು ಮಾಡಿಕೊಂಡಿದ್ದಾರೆ. ಒಂದೊಂದು ಕಡೆ ಎರಡುಮೈಲಿ ದೂರದಲ್ಲಿ ಮೂರು ಮಂಡಲಗಳು ಇವೆ. ಎರಡೆರಡು ಕಿಲೋಮಿಟಾರ್ ದೂರದಲ್ಲಿ ಮೂರು ಮಂಡಲಗಳ ಹೆಡ್‌ಕ್ವಾರ್ಟರ್ಸ್ ಇದೆ. ನಮ್ಮ ತಾಲ್ಲೂಕಿನಲ್ಲೇ ಈ ರೀತಿ ಆಗಿದೆ. ನರಗಲಿಯಲ್ಲಿ ಒಂದು ಮಂಡಲ ಇದೆ. ಅದಕ್ಕೆ ಸೇರಿಕೊಂಡಿರುವ ಆಲಂದೂರು ಎಂಬ ಹಳ್ಳಿಯಲ್ಲಿ ಇನ್ನೊಂದು ಮಂಡಲ ಆಗಿದೆ. ಇದರ ಬಗ್ಗೆ ನಜೀರ್ ಸಾಹೇಬರಿಗೆ ಐದಾರು ಸಲ ಹೇಳಿದೆ. ಆದರೆ ಅವರಿಗೆ ಅವಸರ ಇತ್ತು. ಚುನಾವಣೆ ಬೇಗ ಆಗಬೇಕೆಂಬ ಅವಸರವಿತ್ತು. ಆ ಅವಸರದಲ್ಲಿ ಅವರು ಏನೂ ಒಪ್ಪುತ್ತಿಲ್ಲ. ನಿನ್ನೆ ನಮ್ಮ ಅನೇಕ ಜನತಾ ಶಾಸಕರೂ ಕೂಡಾ ಇದರ ಬಗ್ಗೆ ಹೇಳುತ್ತಿದ್ದರು. ಎಲ್ಲಾ ಕಡೆ ಅನ್ಯಾಯ ಆಗಿದೆ, ಆದರೂ ಇದು ನಡೆದುಹೋಗಲಿ ಎಂಬ ನಿರಾಶಾಭಾವನೆ ಅವರಲ್ಲಿ ಇದೆ. ಅವರಿಗೆ, ಹೇಳಿದರೂ ಸಹ ಅರ್ಥವಾಗುತ್ತಿಲ್ಲ ಇವರು ಅಂದುಕೊಂಡಿರುವುದು ಏನೆಂದರೆ ಒಳ್ಳೆಯ ಉದ್ದೇಶ ಇಟ್ಟು ಕೊಂಡು ಇದನ್ನು ಮಾಡಿದ್ದೇವೆ, ಮೂರು ನಾಲ್ಕು ರಾಜ್ಯಗಳಿಗೆ ಹೋಗಿ ನೋಡಿಕೊಂಡು ಬಂದು, ಪಂಡಲ್ ವ್ಯವಸ್ಥೆ ಮಾಡಿದ್ದೇವೆ, ಆ ವ್ಯವಸ್ಥೆಯಲ್ಲಿ ಜನರಿಗೆ ಒಂದು ಅನುಕೂಲಸಿಗುತ್ತದೆ ಎನ್ನುವ ಉದ್ದೇಶ ಇಟ್ಟುಕೊಂಡು ಮಾಡಿದರು. ಆದರೆ ಇದು ಸಫಲವಾಗಿಲ್ಲ ವಿಫಲವಾಗಿದೆ ಎಂದು ಹೇಳಬೇಕಾಗುತ್ತದೆ. ಏನು ಹೇಳಿಕೊಂಡರೂ ಪ್ರಯೋಜನ ಇಲ್ಲ. ಈಗಲಾದರೂ ಅದನ್ನು ಪುನರ್ ವಿಮರ್ಶೆ ಮಾಡಬೇಕೆಂದು ಒಂದು ಕೋರಿಕೆ. ಇದೇನೂ ಅಂತಹ ಕಷ್ಟವಾದ ಕೆಲಸ ಅಲ್ಲ. ಮೊದಲು ೧೯೮೧ನೇ ಇಸವಿ ಸೆನ್‌ಸಸ್ ಬೇಸಿಸ್ ಮೇಲೆ ಮಾಡುತ್ತೇವೆ ಎಂದರು. ಅದು ಹೋಗಿ ಕಾನ್‌ಸ್ಟಿಟ್ಯೂಷನಲ್ ಪ್ರಾವಿಜನ್ಸ್ ಪ್ರಕಾರ ೧೯೭೦ನೇ ಇಸವಿ ಸೆನ್‌ಸಸ್ ತೆಗೆದುಕೊಳ್ಳಬೇಕೆಂದು ಹೇಳಿ, ೧೯೭೦ಕ್ಕೆ ವಾಪಸ್ ಬಂದರು. ಅನೇಕ ಸಲ ಈ ರೀತಿ ಆಯಿತು, ಒಂದು ಮಂಡಲ್ ಮಾಡುವುದು ಅದನು ಪುನರ್‌ವಿಮರ್ಶೆ ಮಾಡುವುದು, ಈ ರೀತಿ ನಡೆದು ಹೋಯಿತು.

ಈಗಲೂ ಕೂಡ ನವೆಂಬರ್‌ನಲ್ಲಿ ಎಲೆಕ್ಷನ್ ನಡೆಯುತ್ತದೆಂದು ಅವರು ಹೇಳುತ್ತಿದ್ದಾರೆ. ಈ ಚುನಾವಣೆ ಬಗ್ಗೆ ಏನಾದರೂ ಹೇಳಿದರೆ ಬದಲಾವಣೆ ಮಾಡಿಕೊಳ್ಳಬಹುದೇನೋ ಎಂದು ನನ್ನೆ ದಿವಸ ಯೋಚನೆ ಮಾಡಿಕೊಂಡಿದ್ದೆ. ಆದರೆ ಇವತ್ತು ಮಾನ್ಯ ಸಚಿವರು ವಿಧಾನ ಪರಿಷತ್ತಿನಲ್ಲಿ ಚುನಾವಣೆ ಬಗ್ಗೆ ಯಾವುದೇ ರೀತಿಯ ಬದಲಾವಣೆ ಮಾಡಿಕೊಳ್ಳಿವುದಕ್ಕೆ ಸಾಧ್ಯವಿಲ್ಲವೆಂದು ಹೇಳಿಬಿಟ್ಟಿದ್ದಾರೆ. ಆದ್ದರಿಂದ ನಾವು ಇವತ್ತು ಏನು ಹೇಳಿದರೂ ಪ್ರಯೋಜನವಾಗಲಾರದು. ಮಾನ್ಯ ನಜೀರ್‌ಸಾಬ್‌ರವರು ಈ ಸಮಸ್ಯೆಗಳನ್ನು ಬಗೆಹರಿಸಬೇಕು. ಈ ಸಮಸ್ಯೆಗಳು ಪಾರ್ಟಿ ಸಮಸ್ಯೆ ಅಲ್ಲ. ದೇಶದ ಸಮಸ್ಯೆ, ರಾಜ್ಯ ಸಮಸ್ಯೆಗಳು ಇವಾಗಿವೆ. ಮುಂದೆ ನಡೆಯುವ ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ನಮ್ಮ ಶಿಷ್ಯರು ಗೆಲ್ಲಬಹುದು ಅಥವಾ ನಿಮ್ಮ ಶಿಷ್ಯರು ಗೆಲ್ಲಬಹುದು. ಅದು ಬೇರೆ ವಿಷಯ. ಆದರೆ ಮಂಡಲ್‌ಗಳು ಮಾತ್ರ ಎಲ್ಲಾ ಜನತೆಗೆ ಅನುಕೂಲವಾಗುವ ಸ್ಥಳಗಳಲ್ಲಿ ಮಾತ್ರ ಸ್ಥಾಪನೆಯಾಗಬೇಕು. ಪ್ರತಿಯೊಬ್ಬ ಹಳ್ಳಿಯ ಪ್ರಜೆಯೂ ೪-೫ ಮೈಲುಗಳ ಒಳಗೆ ಮಾತ್ರ ನಡೆದು ಮಂಡಲ ಪಂಚಾಯಿತಿಗೆ ಹೋಗುವಂಥ ಅನುಕೂಲ ಇರಬೇಕು. ಆದರೆ ಇವತ್ತು ಆರೀತಿಯ ಅನುಕೂಲಗಳು ಆಗಿಲ್ಲ ಎಂದು ನಾನು ಸಚಿವರಲ್ಲಿ ಹೇಳಬೇಕಾಗಿದೆ. ನಿಮ್ಮ ಅಧಿಕಾರಿಗಳು ಏನು ಮಾಡಿದ್ದಾರೆ ಎಂದರೆ ತಾಲ್ಲೂಕಿನ ಮ್ಯಾಪ್ ಇಟ್ಟುಕೊಳ್ಳುವುದು ಹಾಗು ಜನ ಸಂಖ್ಯೆಯನ್ನು ನೋಡುವುದು. ಒಂದು ಕ್ಯಾಲ್‌ಕುಲೇಟರ್ ತೆಗೆದುಕೊಂಡು ಯಾವ ಯಾವ ಹಳ್ಳಿಯಲ್ಲಿ ಎಷ್ಟೆಷ್ಟು ಜನ ಸಂಖ್ಯೆ ಇದೆ ಎಂದು ಲೆಕ್ಕ ಹಾಕಿ ೫೦,೦೦೦ ಜನ ಸಂಖ್ಯೆ ಬಂದ ತಕ್ಷಣ ಅಲ್ಲಿಗೆ ಒಂದು ಗೆರೆ ಎಳೆದು, ಇದು ಒಂದು ಜಿಲ್ಲಾ ಪರಿಷತ್ ಆಗಲಿ, ಎಂದು ಹೇಳುವುದು. ೧೦,೦೦೦ ಜನ ಸಂಖ್ಯೆ ಬಂದರೆ ಒಂದು ಮಂಡಲ ಪಂಚಾಯಿತಿ ಇರಲಿ ಎಂದು ಹೇಳುವುದಂ. ಹೀಗೆ ಇವರು ಮ್ಯಾಪ್ ಇಟ್ಟುಕೊಂಡು ಮಂಡಲ ಮತ್ತು ಜಿಲ್ಲಾ ಪರಿಷತ್‌ಗಳನ್ನು ವಿಂಗಡಣೆ ಮಾಡಿದ್ದಾರೆಯೇ ಹೊರತು, ಎಲ್ಲಿ ಮಂಡಲ ಪಂಚಾಯಿತಿ ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ, ಎಲ್ಲಿ ಮಾಡಿದರೆ ಜನರಿಗೆ ಅನಾನು

ಕೂಲ ವಾಗುತ್ತದೆ ಎಂಬುದನ್ನು ಇವರು ತಿಳಿದುಕೊಳ್ಳಲಿಲ್ಲ. ಇದರಿಂದ ಏನು ಉದ್ದೇಶ ಇತ್ತೋ ಅದು ಸಫಲವಾಗಿಲ್ಲ. ಆದ್ದರಿಂದ ಮಾನ್ಯ ಸಚಿವರು ಇದನ್ನು ಪುನರ್‌ವಿಮರ್ಶೆ ಮಾಡುವುದು ಒಳ್ಳೆಯದು. ಕೆಲವು ಜಾಗದಲ್ಲಿ ೨ ಕಿಲೋ ಮೀಟರ್ ಒಳಗೇ ೩ ಮಂಡಲ ಪಂಚಾಯಿತಿಗಳು ಆಗಿದೆ. ಏಕೆಂದರೆ, ಅಲ್ಲಿ ಕೆಲವು ದೊಡ್ಡ ಮನುಷ್ಯರುಗಳು ಇದ್ದಾರೆ. ಈ ದೊಡ್ಡ ಮನುಷ್ಯರು ತಮಗೆ ಬೇಕಾದ ಕಡೆ ಮಂಡಲ್ ಪಂಚಾಯಿತಿಗಳನ್ನು ಹಾಕಿಸಿಕೊಂಡಿದ್ದಾರೆ. ದೊಡ್ಡ ಮನುಷ್ಯರು, ಯಾರು ಈ ಮಂಡಲ್‌ಗಳನ್ನು ರಚನೆ ಮಾಡುವುದಕ್ಕೆ ಬರುತ್ತಾರೋ ಅವರಿಗೆ ಐನೂರೋ ಅಥವಾ ಒಂದು ಸಾವಿರವೋ ಹಣ ಕೊಟ್ಟು ಮಾಡಿಸಿಬಿಡುತ್ತಾರೆ. ರೆವಿನ್ಯೂ ಇನ್ಸ್‌ಪೆಕ್ಟರ್ ಮಾಡಿದ್ದನ್ನು ತಹಶೀಲ್ದಾರ್‌ರವರು ಕೇಳುತಾರೆ. ತಹಶೀಲ್ದಾರ್ ಹೇಳಿದ್ದನ್ನು ಅಸಿಸ್ಟೆಂಟ್ ಕಮಿಷನರ್ ಬದಲಾಯಿಸುವುದಕ್ಕೆ ಹೋಗುವುದಿಲ್ಲ ಅಸಿಸ್ಟೆಂಟ್ ಕಮಿಷನರ್ ಹೇಳಿದ್ದನ್ನು ಡಿವಿಷನರ್ ಕಮಿಷನರ್ ಬದಲಾಯಿಸುವುದಕ್ಕೆ ಹೋಗುವುದಿಲ್ಲ. ಮೊನ್ನೆ ನಾನು ಒಬ್ಬ ಡಿವಿಷನಲ್ ಕಮಿಷನರ್ ಹತ್ತಿರ ಹೋಗಿ ನಮ್ಮ ಕ್ಷೇತ್ರದಲ್ಲಿ ಮಾಡಿರುವ ಒಂದು ಮಂಡಲವನ್ನು ಪುನರ್ ವಿಮರ್ಶೆ ಮಾಡಬೇಕೆಂದು ಒಂದು ಪತ್ರವನ್ನು ಕೊಟ್ಟೆ. ಆ ಡಿವಿಷನಲ್ ಕಮಿಷನರ್ ನಾನು ಕೊಟ್ಟ ಪತ್ರವನ್ನು ಸುಮಾರು ೧೦ ಸಾರಿ ಓದಿಸಿಕೊಂಡು ನೋಡಿದ. ಕೊನೆಗೂ ನಾನು ಹೇಳಿದ ವಿಷಯ ಅವನಿಗೆ ಅರ್ಥವಾಗಲಿಲ್ಲ. ಆದ್ದರಿಂದ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಮಂಡಲ್ ಪಂಚಾಯಿತಿಗಳನ್ನು ಮಾಡಿದರೆ ನಿಜವಾದ ಬಡ ಜನತೆಗೆ ಅನುಕೂಲವಾಗಬೇಕು. ಕೆಲವು ಕಡೆ ಮಾಡಿರುವ ಮಂಡಲ್ ಪಂಚಾಯಿತಿಗಳಿಂದ ಜನರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ಸಚಿವರು ಪುನರ್ ವಿಮರ್ಶೆ ಮಾಡಬೇಕು. ಇದರ ಬಗ್ಗೆ ತುರ್ತು ಕ್ರಮ ತೆಗೆದುಕೊಳ್ಳುವುದು ಬಹಳ ಮುಖ್ಯ. ನೀವು ಜನತೆಗೆ ಅಧಿಕಾರವನ್ನು ಕೊಡುತ್ತೇವೆ, ಅಧಿಕಾರವನ್ನು ವಿಕೇಂದ್ರೀಕರಣ ಮಾಡುತ್ತೇವೆಂದು ಹೇಳುತ್ತೀರಿ. ಅದರಂತೆ ಮಾಡುವುದು ಒಳ್ಳೆಯದು. ಆದರೆ ಈಗ ಮಾಡಿರುವ ಮಂಡಲ್ ಪಂಚಾಯಿತಿಗಳಲ್ಲಿ ತಪ್ಪುಗಳಾಗಿವೆ. ಇದನ್ನು ದಯವಿಟ್ಟು ಪುನರ್ ವಿಮರ್ಶೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಶ್ರೀನಿವಾಸ್‌ರವರೇ ನೀವು ಮಾತನಾಡಿ.

ಶ್ರೀ ಬಿ. ಆರ್. ನೀಲಕಂಠಪ್ಪ.—ಅಧ್ಯಕ್ಷರೇ, ಈಗಾಗಲೇ ಟೈಮ್ ಆಗಿಬಿಟ್ಟಿದೆ, ಇನ್ನು ಮಾತನಾಡುವವರು ಬೇಕಾದಷ್ಟು ಜನ ಇದ್ದಾರೆ. ಆದ್ದರಿಂದ ನಾಳೆಗೆ ಸಭೆಯನ್ನು ಮುಂದೂಡಿ.

ಉಪಾಧ್ಯಕ್ಷರು.—ನೀವು ಕುಳಿತುಕೊಳ್ಳಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸನ್ಮಾನ್ಯ ಅಧ್ಯಕ್ಷರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಸುಮಾರಾಗಿ ಈ ವಿಷಯದ ಬಗ್ಗೆ ಮೊನ್ನೆ ದಿನವೇ ಬಹಳ ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆಂದು ಕಾಣುತ್ತದೆ. ಆದ್ದರಿಂದ ಈಗ ಮಾತನಾಡುವುದು ಅವಶ್ಯಕತೆ ಇಲ್ಲ. ಮಾನ್ಯ ಸಚಿವರು ಉತ್ತರ ಹೇಳುವುದಕ್ಕೆ ಸಿದ್ಧವಾಗಿದ್ದರೆ ಉತ್ತರ ಕೊಡಲಿ. ಉತ್ತರ ಕೊಡುವುದನ್ನು ಪೋಸ್ ಪೋನ್ ಮಾಡುತ್ತೇನೆ ಎಂದರೆ ಸದಸ್ಯರುಗಳು ತಮ್ಮ ಭಾಷಣವನ್ನು ಮುಂದುವರಿಸಬಹುದು. ಈ ವಿಷಯದ ಮೇಲೆ ಸಾಕಷ್ಟು ಮಾತನಾಡಿರುವುದರಿಂದ, ಈಗ ಆ ಕಡೆಯ ಮಾನ್ಯ ಸದಸ್ಯರೊಬ್ಬರು ಮಾತನಾಡಲಿ ಆಮೇಲೆ ಈ ಕಡೆಯ ಮಾನ್ಯ ಸದಸ್ಯರೊಬ್ಬರು ಮಾತನಾಡಲಿ ಆಮೇಲೆ ಸಾಕು.

(ಗೊಂದಲ)

ಶ್ರೀ ಬಿ. ಆರ್. ನೀಲಕಂಠಪ್ಪ.—ಬಹಳ ಜನ ಮಾತನಾಡುವವರು ಇದ್ದಾರೆ. ಆದ್ದರಿಂದ ಉತ್ತರವನ್ನು ಪೋಸ್ಟ್‌ಪೋನ್ ಮಾಡಿ.

ಉಪಾಧ್ಯಕ್ಷರು.—ನೀವು ಕುಳಿತುಕೊಳ್ಳಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಕುಳಿತುಕೊಳ್ಳೀ ಸ್ವಾಮಿ.

ಶ್ರೀ ಬಿ. ಆರ್. ನೀಲಕಂಠಪ್ಪ —ಜನತಾ ಪಾರ್ಟಿಯವರು ಇದರ ಬಗ್ಗೆ ಯಾರು ಮಾತನಾಡಿಲ್ಲ. ಇನ್ನೂ ಮಾತನಾಡುವವರು ಬಹಳ ಜನ ಇದ್ದಾರೆ. ನಾಳೆ ದಿನ ಮಾತನಾಡುವುದಕ್ಕೆ ಅವಕಾಶ ಕೊಡಿ. ಈಗ ಪೋಸ್ಟ್‌ಪೋನ್ ಮಾಡಿ.

(ಗೊಂದಲ)

ಉಪಾಧ್ಯಕ್ಷರು.—ನೀವು ಕುಳಿತುಕೊಳ್ಳಿ. ಶ್ರೀನಿವಾಸ್‌ರವರೇ ನೀವು ಮಾತನಾಡಿ.

† ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೇ, ಈ ಜಿಲ್ಲಾ ಪರಿಷತ್ತು ಈ ಮಂಡಲ ಪಂಚಾಯಿತಿ ಕ್ಷೇತ್ರ ವಿಂಗಡಣೆ ವಿಚಾರ ಇದೇ ಮೊದಲ ಬಾರಿಗೆ ಪ್ರಸ್ತಾಪ ಆಗಿರತಕ್ಕಂಥಾದ್ದಲ್ಲ ಮಾನ್ಯ ಶ್ರೀ ಬಂಗಾರಪ್ಪನವರು ಈಗಾಗಲೇ ಹೇಳಿದಂತೆ, ನಮ್ಮ ವಿಷಯ ಏನು ಇಲ್ಲಿ ಮಂಡಿಸಬೇಕಾಗಿತ್ತೋ ಅದನ್ನು ಸ್ಪಷ್ಟವಾಗಿ, ಸವಿವರವಾಗಿ ಮಂಡಿಸಿದ್ದೇವೆ. ಇನ್ನೂ ಒಂದು ವಿಷಯ ಮಾನ್ಯ ವೆಂಕಟರಾಮಯ್ಯನವರು ಹೇಳಿದಂತೆ ಈಗಾಗಲೇ ಸರ್ಕಾರದ ಪರವಾಗಿ ತಮ್ಮ ನಿಲುವು ಏನಂ ಎಂದು ಮಾನ್ಯನಜೀರ್‌ಸಾಬ್‌ರವರು ಹೇಳಿಬಿಟ್ಟಿರುವುದರಿಂದ ಈಗ ನಾವು ಎಷ್ಟೇ ಭಾಷಣ ಮಾಡಿದರೂ ಕೂಡ ಅದುಕೇವಲ ಗೋರ್ಕಲ್ ಮೇಲೆ ನೀರು ಹರಿದಂತೆ ಆಗಿರತ್ತದೆ. ಅದು ಬೇಡ ಎಂದರೆ ಅರಣ್ಯ ರೋಧನವಾಗುತ್ತದೆ. ನಮ್ಮ ಭಾಷಣ ಅರಣ್ಯ ರೋಧನವಾಗಿ ಪರ್ಯವಸಾನವಾಗಬಹುದು. ಈ ಒಂದು ದೃಷ್ಟಿಯಿಂದ ನನ್ನ ಭಾಷಣವನ್ನು ಮಿತಗೊಳಿಸಲಿಕ್ಕೆ ಇಚ್ಛಿಸುತ್ತೇನೆ ಕಳೆದ ಅಧಿವೇಶನ ಕಾಲದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೆವು. ಆದಕ್ಕೆ ಕೆಲವಾರು ಸಮಾಧಾನಗಳನ್ನು ಭರವಸೆಗಳನ್ನು ಮಾನ್ಯ ಶ್ರೀ ನಜೀರ್‌ಸಾಬ್‌ರವರು ಈ ಪಾಠಿಯ ಮಂತ್ರಿಯಾಗಿ ಹಾಗೂ ಸರ್ಕಾರದ ಪರವಾಗಿ ನಮಗೆ ಕೊಟ್ಟಿದ್ದರು. ಸಾಮಾನ್ಯವಾಗಿ ಸರ್ಕಾರದ ಪರವಾಗಿ ಯಾವುದಾದರು ಭರವಸೆಯನ್ನು ಕೊಟ್ಟರೆ ಅದನ್ನು ನಂಬಬೇಕಾದ್ದು ನಮ್ಮ ಧರ್ಮ. ಕಳೆದ ಅಧಿವೇಶನದಲ್ಲಿ ಈ ಕ್ಷೇತ್ರ ವಿಂಗಡಣೆಯ ಬಗ್ಗೆ ಭರವಸೆ ಕೊಟ್ಟರು. ಅದನ್ನು ಕಾರ್ಯಗತ ಮಾಡುತ್ತಾರೆ ಎಂಬ ದೃಢ ವಿಶ್ವಾಸವನ್ನು ಇಟ್ಟುಕೊಂಡು ಕಳೆದ ಅಧಿವೇಶನವನ್ನು ಮುಗಿಸಿ ಹೊರಟೆವು. ಆದರೆ ಕೊನೆಗೆ ಸಂಪೂರ್ಣವಾಗಿ ತದ್‌ವಿರುದ್ಧ ವಿಚಾರಗಳು ನಡೆದಿವೆ. ಮಾನ್ಯ ಸಚಿವರು ನಾನು ಹೇಳುವುದನ್ನು ಕೇಳಿಸಿಯೂ ಕೇಳಿಸದೆ ಹಾಗೆ ಕುಳಿತರೆ ನಾವೇನು ಮಾಡುವುದು ? ಕಳೆದ ಅಧಿವೇಶನದಲ್ಲಿ ತಾವು ಏನು ಭರವಸೆಗಳನ್ನು ಕೊಟ್ಟಿದ್ದೀರಿ, ಅದನ್ನು ನಂಬಿ ದೃಢ ವಿಶ್ವಾಸ ಇಟ್ಟುಕೊಂಡು ನಾವು ಹೋದೆವು. ಆದರೆ ಆದದ್ದೇ ಬೇರೆ. ಇವತ್ತು ನಮ್ಮ ಪ್ರಜಾ ಪ್ರಭುತ್ವವನ್ನು ಕೆಳಹಂತದವರೆಗೆ ಅರ್ಥಪೂರ್ಣವಾಗಿ ತಲುಪಿಸಬೇಕು ಎನ್ನುವ ವಿಚಾರದಲ್ಲಿ ನಿಮ್ಮ ಸರ್ಕಾರಕ್ಕೆ ಎಷ್ಟು ಶ್ರದ್ಧೆ ಇದೆಯೋ ಅಷ್ಟೇ ಶ್ರದ್ಧೆ ಅದಕ್ಕಿಂತ ಆಳವಾದ ಶ್ರದ್ಧೆ ನಮಗೂ ಇದೆ. ವಿಕೇಂದ್ರೀಕರಣದ ತತ್ವ ನಿಮ್ಮ ಸರ್ಕಾರ ಬಂದ ಮೇಲೆ ಬಂದದ್ದು ಅಲ್ಲ. ಈ ತತ್ವವನ್ನು ಮೊದಲಿನಿಂದಲೂ ಎಲ್ಲರೂ ಇಷ್ಟಪಡುತ್ತಿದ್ದರು. ಸಂವಿಧಾನದಲ್ಲೂ ಈ ತತ್ವವನ್ನು ಅಳವಡಿಸಲಾಗಿದೆ. ವಿಕೇಂದ್ರೀಕರಣವನ್ನು ಮಾಡಬೇಕು ಎನ್ನುವ ವಿಷಯದಲ್ಲಿ ಕಾಂಗ್ರೇಸ್ ಪಕ್ಷದ್ದು ಪವಿತ್ರ ಪಾತ್ರ ಇದೆ. ಕೆಲವು ರಾಜ್ಯಗಳಲ್ಲಿ ವಿಕೇಂದ್ರೀಕರಣ ಕಾರ್ಯಗತವಾಗಿರುವುದೂ ಉಂಟು. ತಾತ್ವಿಕವಾಗಿ ಯಾವುದೇ ಬಿನ್ನಾಭಿಪ್ರಾಯ ಇದರಲ್ಲಿ ನಮಗೆ ಇಲ್ಲ. ಇವರು ಇದನ್ನು ತಂದಿದ್ದಾರೆ ಅದಕ್ಕೊಸ್ಕರ ವಿರೋಧ ಮಾಡಬೇಕು ಎನ್ನುವ ಪ್ರವೃತ್ತಿಯೂ ನಮ್ಮದಲ್ಲ ಚುನಾವಣೆಯಲ್ಲಿ ಅವರು ಗೆಲ್ಲುತ್ತಾರೋ ಅಥವಾ ನಾವು ಗೆಲ್ಲುತ್ತೇವೆಯೋ, ಯಾರು ಸೋಲುತ್ತಾರೋ ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ. ಚುನಾವಣೆ ಮಾಡುವುದಕ್ಕೆ ಅವರಿಗೆ ಹೆದರಿಕೆ ಇದ್ದರೂ ಇರಬಹುದು. ನಮಗೆ ಆ ಹೆದರಿಕೆ ಇಲ್ಲ. ಹೊಳಿಯಲ್ಲಿ ನಾವು ಮುಳುಗಿದ್ದೇವೆ. ಹೊಳೆಯಲ್ಲಿ ಮುಳುಗಿದವರಿಗೆ ಚಳಿ ಏನು ಗಾಳಿ ಏನಂ ?

ನಮಗೆ ಈಗ ಚುನಾವಣೆಯಲ್ಲಿ ಸೋಲುವುದು ಗೆಲ್ಲುವುದು ಪ್ರಶ್ನೆಯಲ್ಲ. ನಮಗೆ ಆತ್ಮವಿಶ್ವಾಸ ಇದೆ, ನಾವು ಚುನಾವಣೆಯನ್ನು ಎದುರಿಸುತ್ತೇವೆ. ನೀವು ಏಷ್ಟೆಲ್ಲಾ ಇಲ್ಲದೇ ಇದ್ದ ವಿಂಗಡಣೆಯನ್ನು ನಡೆಸಿದರೂ ಕೂಡ ಆ ಬಗ್ಗೆ ನಮಗೆ ಯಾವುದೇ ವಿಶ್ವಾಸ ಕುಸಿದಿಲ್ಲ. ಒಂದು ವಿಷಯ ನಮ್ಮ ಗ್ರಾಮೀಣ ಜನರ ಜನಜೀವನದ ಭೂಗೋಲವನ್ನು ಹೊಸದಾಗಿ ಎರಕ ಹೊಯ್ಯುತ್ತಾ ಇರತಕ್ಕಂತಹ ಸಂದರ್ಭದಲ್ಲಿ ಆ ಎರಕ ಹೊಯ್ಯತಕ್ಕಂತಹ ಅಚ್ಚು ಏನಿದೆ. ಆ ಅಚ್ಚನ್ನು ಸರಿಯಾಗಿ ಮಾಡತಕ್ಕಂಥಾದ್ದು ನಿಮ್ಮ ಧರ್ಮ. ಏಕೆಂದರೆ ಅದು ಹಲವಾರು ಕಾಲಗಳ ಪರೆಗೆ ಉಳಿಯ ಬೇಕಾದುದು. ಈಗ ಒಂದು ರೀತಿಯಲ್ಲಿ ಇರತಕ್ಕಂತಹ ಭೂಗೋಲವನ್ನ ಬದಲಾಯಿಸಿ ಹೊಸದಾಗಿ ಗೆರೆಯನ್ನು ಎಳೆಯುತ್ತಾ ಇದ್ದೇವೆ. ಒಂದು ಹೊಸದನ್ನೇ ಸೃಷ್ಟಿಸುತ್ತಾ ಇದ್ದೇವೆ. ಇವೊತ್ತು ಚುನಾವಣೆಗೋಸ್ಕರವಾಗಿ, ೫ ವರ್ಷಗಳಿಗೋಸ್ಕರವಾಗಿಯೋ, ಹತ್ತು ವರ್ಷಗಳಿಗೋಸ್ಕರವಾಗಿ ಮಾಡತಕ್ಕಂತಹ ವಿಷಯ ಇದಲ್ಲ. ಇದು ಶಾಶ್ವತವಾಗಿ ಗ್ರಾಮೀಣ ಭಾಗದ ಪ್ರಜಾಪ್ರಭುತ್ವ ವ್ಯವಸ್ಥೆಯಾಗಿ, ಒಂದು ಜನಜೀವನದ ವ್ಯವಸ್ಥೆಯಾಗಿ, ಒಂದು ಅಭಿವೃದ್ಧಿಯ ಘಟಕವಾಗಿ, ಸರ್ಕಾರದ ಒಂದು ಘಟಕವಾಗಿ, ಪುನರ್ ನಿರ್ಮಾಣ ಮಾಡತಕ್ಕಂತಹ ಒಂದು ಹೊತ್ತಿನಲ್ಲಿ ಯಾವ ಯಾವ ವಸ್ತುಸ್ಥಿತಿಗಳನ್ನು ನಾವು ಗಮನಿಸಿಕೊಳ್ಳಬೇಕು. ಯಾವ ಯಾವ ಆಯಾಮಗಳನ್ನು ಎಷ್ಟು ಬೇಕೋ ಅಷ್ಟನ್ನೂ ನಾವು ಮಾಡಬೇಕೆಂಬುದನ್ನು ಗಮನ

ದಲ್ಲಿಟ್ಟುಕೊಂಡು ಮಾಡಬೇಕಾದುದು. ಈ ಮನೆಯು ಧರ್ಮವಾಗಿದೆ, ನಮ್ಮೆಲ್ಲರ ಕರ್ತವ್ಯವಾಗಿದೆ. ಮತ್ತು ಸರಕಾರದ ಒಂದೇ ಧರ್ಮವೂ ಆಗಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇವೊತ್ತು ಈ ಗ್ರಾಮಗಳು ಹೀಗೆ ಬೆಳೆಯುವುದಕ್ಕೆ ನಾವಾಗಲೀ, ನೀವಾಗಲೀ, ಮಾನ್ಯ ನಜೀರ್‌ಸಾಬ್‌ರವರಾಗಲೀ, ಕಾರಣರು ಅಲ್ಲ ಅಂತೆಯೇ ನಾವ್ಯಾರೂ ಮಾಡಿರತಕ್ಕಂಥಾದ್ದೂ ಅಲ್ಲ. ಅದು ಅದು ತಾನಾಗಿಯೇ ಬೆಳೆದುಕೊಂಡು ಬಂದಿರತಕ್ಕಂತಾದ್ದು, ಶತಶತಮಾನಗಳಿಂದ ರೂಪುಗೊಂಡಿರುವಂತಹ ಒಂದು ಗ್ರಾಮೀಣ ಜನಜೀವನ ಅಲ್ಲಿ ಇದೆ. ಅದೇನೂ ಕೃತಕವಾಗಿ ಕಟ್ಟಿರತಕ್ಕಂಥಾದ್ದು ಅಲ್ಲ, ಮಾಡಿರತಕ್ಕಂಥಾದ್ದು ಅಲ್ಲ. ಅಂದರೆ ಚಂಡಿಗಡ್ ನಗರದ ತರಹದಲ್ಲಿ ನಾವೇ ಮಾಡಿರತಕ್ಕಂಥಾದ್ದು ಅಲ್ಲ. ಅದು ತನ್ನಷ್ಟಕ್ಕೆ ತಾನೇ ಬೆಳೆದುಕೊಂಡು ಬಂದಿದೆ. ಅದರ ಸ್ವರೂಪ ಹಾಗೆಯೇ ಇದೆ ಇವೊತ್ತು ನಾವು ಪ್ರಜಾಪ್ರಭುತ್ವವನ್ನು ರಾಷ್ಟ್ರಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ ಒಪ್ಪಿಕೊಂಡಿದ್ದರೂ ಸಹ ಇವೊತ್ತು ಗ್ರಾಮೀಣ ಭಾಗದ ಜನಜೀವನವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಒಂದು ರೀತಿಯ ಪ್ರಜಾಪ್ರಭುತ್ವಾತ್ಮಕವಾದಂತಹ ಮೌಲ್ಯಗಳನ್ನು ಅಥವಾ ಅದರ ಒಂದು ಸೂಕ್ಷ್ಮತೆಗಳನ್ನು ಅವರು ಒಪ್ಪಿಕೊಂಡಿರತಕ್ಕಂಥಾ ಒಂದು ಸಮಾಜವನ್ನು ಅಲ್ಲಿ ನಾವು ಕಾಣುವುದಿಲ್ಲ. ಇವೊತ್ತು, ಸ್ವಾತಂತ್ರ್ಯದ ನಂತರದ ಇಷ್ಟು ವರ್ಷಗಳ ನಂತರವೂ ಕೂಡ ಒಂದು ರೀತಿಯಲ್ಲಿ ಶ್ರೇಣೀಕೃತ ಸಮಾಜದಲ್ಲಿ ನಾವು ಬದುಕುತ್ತಾ ಇದ್ದೇವೆ. ಬಡವ, ಬಲ್ಲಿದ–ಉಳ್ಳವ, ಇಲ್ಲದವ,– ಇತರ ಭಿನ್ನ ಭೇದಗಳು, ವಿಷಮತೆಗಳು ವಂಚನೆ, ಶೋಷಣೆಯ ವ್ಯೂಹಗಳು, ಇವೆಲ್ಲವನ್ನು ಕೂಡ ಗ್ರಾಮೀಣ ಭಾಗದಲ್ಲಿ ನಾವು ನೋಡುತ್ತಾ ಇದ್ದೇವೆ. ಇವೆಲ್ಲವುಗಳೂ ಕೂಡ ಹಾಸು ಹೊಕ್ಕಾಗಿ, ಅಲ್ಲಿ ಹೆಣೆದುಕೊಂಡಿರತಕ್ಕಂಥಾದ್ದನ್ನು ನಾವು ಅಲ್ಲಿ ನೋಡುತ್ತಾ ಇದ್ದೇವೆ. ಇಂತಹ ಒಂದು ಸಮಾಜವನ್ನು ನಾವಿ ಕಾಣುತ್ತಿದ್ದೇವೆ. ಅಲ್ಲಿ ಇವೊತ್ತು ಹಣ ಇರತಕ್ಕಂತಹವರು, ಆಸ್ತಿ ಪಾಸ್ತಿ ಇರತಕ್ಕಂತಹವರು, ಸಮಾಜದಲ್ಲಿ ಒಂದು ಸ್ಥಾನಮಾನ ಇರತಕ್ಕಂತಹವರು ಇತ್ಯಾದಿಗಳಾಗಿ ಅಲ್ಲದೇ, ಇವೆಲ್ಲವೂ ಇರತಕ್ಕಂತಹವರು ಕೂಡ ಇದ್ದಾರೆ, ಅಷ್ಟೇ ಅಲ್ಲದೇ ಇವುಗಳು ಯಾವುವೂ ಇಲ್ಲದೇನೇ ಇವೆಲ್ಲವೂ ಇರುವವರ ಸುತ್ತಮುತ್ತ ಉಪಗೃಹಗಳ ರೀತಿಯಲ್ಲಿ ಸುತ್ತಿಕೊಂಡು ಜೀವನ ಮಾಡತಕ್ಕಂತಹ ಬಹುಸಂಖ್ಯಾತ ಜನರೂ ಇದ್ದಾರೆ. ಕೃಷಿ ಕಾರ್ಮಿಕರು ಇದ್ದಾರೆ, ಇವರು ಆಸ್ತಿಪಾಸ್ತಿಯನ್ನೂ ಹೊಂದಿಲ್ಲ, ಸ್ಥಾನಮಾನಗಳನ್ನೂ ಹೊಂದಿಲ್ಲ, ಉಳ್ಳವರ ಬಳಿ ಕೂಲಿನಾಲಿ ಮಾಡಿಕೊಂಡು, ಇವೊತ್ತು ದುಡಿದುದನ್ನು ಇವೊತ್ತು, ತೆಗೆದುಕೊಂಡು ತಿಂದು, ಕೆಲಸ ಇದ್ದರೆ ಮಾತ್ರ ಉಂಡು. ಕೆಲಸ ಕೊಡುವವರು ಬಾ ಎಂದು ಕರೆದರೆ ಹೋಗುವುದು, ಬೇಡ ಎಂದರೆ ಸುಮ್ಮನೇ ಇರುವುದು, ಇದು ಇವರ ಪಾಡು. ಇವರ ಬಗ್ಗೆ ಯಾವ ತರಹದ ಒಂದು ಹಿತರಕ್ಷಣೆಯೂ ಇಲ್ಲ. ಅಂತೆಯೇ ಯಾವುದೇ ತರಹ ಒಂದು ಸಂಘಟನೆಯೂ ಇವರಲ್ಲಿ ಇಲ್ಲ ಇಂತಹ ಹಲವಾರು ವಿಷಯಗಳನ್ನು ವಸ್ತುನಿಷ್ಠವಾಗಿ ಗಮನಿಸಿಕೊಳ್ಳಬೇಕು. ಇವೊತ್ತು ನೀವು ಹೊಯ್ಯುತ್ತಿರುವ ಎಡತಿತ್ತಾಗಿ ಮಾಡುತ್ತಿರಿಎನಕ್ಕವ ಪ್ರಶ್ನೆ ಏನೆಂದರೆ, ಯಾವ ರೀತಿ ಗ್ರಾಮ, ಅಥವಾ ಗ್ರಾಮ ಸಮೂಹಗಳನ್ನು ನಾವು ಮಾಡಬೇಕಾಗಿದೆ, ಯಾವ ರೀತಿಯಲ್ಲಿ ಹೊಂದಾಣಿಕೆ ಇದರಲ್ಲಿ ಇದೆ ಎಂದು ನಾವು ನೋಡಿಕೊಳ್ಳಬೇಕಾದುದು ಅಗತ್ಯವಿದೆ. ನಾಳೆ ದಿವಸ ನೀವು ಸಂಸ್ಥೆಗಳನ್ನು ಮಾಡುತ್ತೀರಿ ಆ ಸಂಸ್ಥೆಗೆ ಕೃತಕವಾಗಿ ಅದಕ್ಕೆ ಜೀವ ಬರುವುದಿಲ್ಲ. ಒಂದು ರೀತಿಯಲ್ಲಿ ಆರ್‌ಗ್ಯಾನಿಕ್ ಯುನಿಟಿ ಇದರ ಒಳಗಡೆ ಇರಬೇಕು. ಏನು ಸ್ವಾಭಾವಿಕ ಸಂಬಂಧ ಎಂದು ನಾವೇನು ಹೇಳಂತ್ತೇವೆ ಯಾವ ಒಂದು ಗುಂಪನ್ನು ನಾವು ಮಾಡುತ್ತೇವೆ ಅದರ ಮಧ್ಯದಲ್ಲಿ ಅದು ಇರಬೇಕಾಗುತ್ತದೆ ಇದು ಇಲ್ಲದೇನೆ ತದ್ವಿರುದ್ಧವಾದಂತಹ ೮ ಗ್ರಾಮಗಳನ್ನು ನೋಡಿಕೊಂಡು ಅವುಗಳನ್ನು ಸೇರಿಸಿ, ಅದಕ್ಕೆ ೯ ನೇ ಗ್ರಾಮವಾಗಿ ಒಂದು ತರಲೇ ಗ್ರಾಮವನ್ನು ಆದರೊಳಗೆ ಸೇರಿಸಿಬಿಟ್ಟರೆ, ಆ ಇಡೀ ಮಂಡಲ್ ಪಂಚಾಯತಿಯು ಮಂಡೆ ಒಡೆಯುವ ಪಂಚಾಯಿತಿ ಆಗುತ್ತದೆ. ಅಷ್ಟೇ ಹೊರತಾಗಿ ಅದು ಖಂಡಿತವಾಗಿ ಮಂಡಲ್ ಪಂಚಾಯತಿ ಆಗುವುದಿಲ್ಲ. ಆದುದರಿಂದ ಆರ್‌ಗ್ಯಾನಿಕ್ ಯೂನಿಟ್ ಎಂದು ಏನು ಹೇಳುತ್ತೇವೆ ಅದು ಬರುವಂತೆ ನೋಡಿಕೊಳ್ಳಬೇಕಾದುದು ಬಹಳ ಪ್ರಾಮುಖ್ಯವಾದುದು. ಹಾಗೆ ಭಾರದೇ ಹೋದರೆ ಯಾವ ಮಂಡಳವೂ ಆದರೂ ಕೂಡ ಯಶಸ್ವಿಯಾಗುವುದಿಲ್ಲ. ನಾಳೆಯ ದಿವಸ ಈ ಪ್ರಜಾಪ್ರಭುತ್ವವನ್ನು ೧೦೦ ಪರ್ಸೆಂಟ್‌ನಷ್ಟು ಅಲ್ಲಿ ಕೊಟ್ಟುಬಿಟ್ಟರೆ ಆಯಿತೋ ಅಥವಾ ಪ್ರಜಾಪ್ರಭುತ್ವ ವ್ಯವಸ್ಥೆಯು ಸರಿ ಹೋಗಬೇಕೋ ? ಈಗ, ಇವೊತ್ತಿನ ದಿವಸ, ನಾವು ಈ ವಟ್ಟದ ಪ್ರಜಾಪ್ರಭುತ್ವವನ್ನು ನಿರ್ವಹಿಸುವುದಕ್ಕೆ ಬೇಕಾದಷ್ಟು ಸಮಸ್ಯೆಗಳನ್ನು ಎದುರಿಸುತ್ತಿರತಕ್ಕಂಥಾ ಹೊತ್ತಿನಲ್ಲಿ, ಅಲ್ಲಲ್ಲಿ ಸಣ್ಣ ವಲಯ ಆಗಿರತಕ್ಕಂಥಾ ಪ್ರತಿಯೊಂದಕ್ಕೂ ಕೂಡ ದೊಡ್ಡ ದೊಡ್ಡ ಆಯಾಮಗಳು ಅಲ್ಲಿ ಪ್ರಾಪ್ತಿ ಆಗುತ್ತದೆ. ಪ್ರತಿಯೊಂದೂ ಕೂಡ ದ್ವೇಶಾಸೂಯೆಯ ಚಾಯ್ಸೆ

ಯಲ್ಲಿ ಬರುತ್ತವೆ. ಪ್ರತಿಯೊಂದೂ ಕೂಡ ವ್ಯಕ್ತಿಗತವಾದ ಪೈಪೋಟಿಯಲ್ಲಿ, ದ್ವೇಷಾಸೂಯೆಯಲ್ಲಿ, ಪರ್ಯವಸನವಾಗತಕ್ಕಂಥಾ ಸಂದರ್ಭದಲ್ಲಿ ಒಂದಕ್ಕೊಂದು ಸಾಕಷ್ಟು ಹೊಂದಾಣಿಕೆ ಇರತಕ್ಕಂತಹ ಒಂದು ಗುಂಪನ್ನು ನಾವು ರಚನೆ ಮಾಡಬೇಕು. ಅದೇ ಹೊತ್ತಿನಲ್ಲಿ ಅಧಿಕಾರವನ್ನು ಯಾರ ಕೈಯಲ್ಲಿ ಕೊಡುತ್ತೀರಿ, ಅಂದರೆ, ಹಿಂದೆ ನಮ್ಮ ಗ್ರಾಮಗಳಲ್ಲಿ ಒಂದು ರೀತಿಯಲ್ಲಿ ಪ್ರಜಾಪ್ರಭುತ್ವ ಇತ್ತು. ಇರಲಿಲ್ಲ ಎಂದೇನೂ ಇಲ್ಲ. ಗ್ರಾಮ ಪ್ರಭುತ್ವ ಎನ್ನತಕ್ಕಂಥಾದ್ದು ಇತ್ತು. ಪ್ರಜಾಪ್ರಭುತ್ವ ಇಲ್ಲದಿದ್ದರೂ. ಯಾರ್ಯಾರು ಗ್ರಾಮಗಳಲ್ಲಿ, ಗ್ರಾಮಸಂಘಗಳಲ್ಲಿ ಶಕ್ತಿ ಹೊಂದಿದ್ದಾರೆ, ಯಾರು ಆಸ್ತಿಪಾಸ್ತಿಗಳನ್ನು ಹೊಂದಿದ್ದಾರೆ ಯಾರಲ್ಲಿ ಶಕ್ತಿ ಇದೆ. ಯಾರಿಗೆ ಸಾಮಾಜಿಕವಾಗಿ ಒಂದು ಸ್ಥಳದಲ್ಲಿ ಹೆಚ್ಚಿನ ಒಂದು ಶಕ್ತಿ ಸಾಮರ್ಥ್ಯಗಳು ಇದ್ದಾವೆ, ಸ್ಥಾನಮಾನಗಳು ಇದ್ದಾವೆ. ಇಂತಹ ಜನರು ಪ್ರಭುತ್ವವನ್ನು ನಡೆಸುತ್ತಾ ಇದ್ದರು. ಅದು ಒಂದು ರೀತಿಯ ಪಾಳೆಗಾರಿಕೆ ವ್ಯವಸ್ಥೆ ಆಗಿತ್ತು. ತಿಳಿದೋ ತಿಳಿಯದೆಯೋ ಆ ತರಹದ ಪಾಳೆಗಾರಿಕೆಯ ಒಂದು ವ್ಯವಸ್ಥೆ ಅಲ್ಲಿತ್ತು. ಅದರ ಪಳಿಯುಳಿಕೆಗೆ ನೀವು ಪುನರುಜ್ಜೀವನ ಕೊಡುವುದಾದರೆ, ಇವೊತ್ತು ನಮ್ಮ ಮೇಲ್ಮಟ್ಟದ ಪ್ರಜಾಪ್ರಭುತ್ವದಿಂದಾಗಿ ಶಿಥಿಲವಾಗಿರತಕ್ಕಂತಹ ಪಾಳೆಗಾರಿಕೆ ಏನಿದೆ, ಇದರಿಂದಾಗಿ ಈ ಶಿಥಿಲವಾಗಿರತಕ್ಕಂಥಾದ್ದಕ್ಕೆ ಮತ್ತೆ ನೀವು ನೀರು ಎರೆದು ಅದನ್ನು ಚಿಗುರಿಸುವುದಾದರೆ ಯಾವ ಉದ್ದೇಶದಿಂದ ಇದನ್ನು ಮಾಡಿದ್ದೀರೋ ಆ ಉದ್ದೇಶಕ್ಕೆ ಅಥವಾ ತತ್‌ವಿರುದ್ಧವಾದಂತಹ ಒಂದು ವಿಷಯ ಅಲ್ಲಿ ಸಂಭವಿಸುತ್ತದೆ. ಅದಕ್ಕೆ ಇವೊತ್ತು ನೀವು ಏನು ಮಾಡಬೇಕು? ನೀವು ಬದಲಾವಣೆಗಳನ್ನು ತರಬೇಕೆಂದು ಇದ್ದೀರಿ, ಒಂದು ಕಡೆಯಲ್ಲಿ ಜೀವಂತ ಘಟಕಗಳು ಆಗಬೇಕು, ಇನ್ನೊಂದು ಕಡೆಯಲ್ಲಿ ಯಾರು ಇವೊತ್ತಿನವರೆಗೆ ವಂಚಿತರಾಗಿದ್ದಾರೆ, ಯಾರು ಇವೊತ್ತಿನವರೆಗೆ ಶೋಷಿತರಾಗಿದ್ದಾರೆ. ಯಾರಿಗೆ ಇವೊತ್ತಿನವರೆಗೆ ಅಧಿಕಾರ ಸಿಗಲಿಲ್ಲ, ಅಂತಹವರಿಗೆ ಅಧಿಕಾರ ಹೋದರೆ ಮಾತ್ರ ಅವರಿಗೆ ಪ್ರಜಾಪ್ರಭುತ್ವ ತಲುಪಿಸಿದ ಹಾಗೆ ಆಗುತ್ತದೆ. ಹಾಗೆ ಇಲ್ಲದೇನೇ, ಪ್ರಜಾಪ್ರಭುತ್ವದ ಹೆಸರನ್ನು ತೆಗೆದುಕೊಂಡು ಹೋಗಿ ಈಗಾಗಲೇ ಸತ್ತುಹೋಗಿರತಕ್ಕಂಥಾ ಒಂದು ಪಾಳೆಗಾರಿಕೆಯನ್ನು ಮತ್ತೆ ಪುನರುಜ್ಜೀವನ ಮಾಡುವುದಕ್ಕೆ ಪ್ರಯತ್ನ ಪಟ್ಟರೆ, ಆದರಿಂದ ಏನೂ ಆಗುವುದಿಲ್ಲ. ಒಂದು ವೇಳೆ ಈಗ ಇದ್ದಹಾಗೆ ಇದ್ದರೂ ಅಡ್ಡಿ ಇಲ್ಲ. ಅದಕ್ಕೆ ಬದಲು ಒಂದು ಸತ್ತು ಹೋಗಿರತಕ್ಕಂಥಾ ವ್ಯವಸ್ಥೆಗೆ ಹೀಗೆ ಮಾಡಿದಲ್ಲಿ ಹೊಸ ಜೀವನ ಕೊಟ್ಟಹಾಗಾಗುತ್ತದೆ. ಈ ಒಂದು ದೃಷ್ಟಿಯಿಂದ ಕ್ಷೇತ್ರ ವಿಂಗಡಣೆಯನ್ನು ನೀವು ಬಹಳ ಲಘುವಾಗಿ ನಿರ್ವಹಿಸಿದ್ದೀರಿ. ಇದು ಬಹಳ ತಪ್ಪುಗಳಿಂದ ಕೂಡಿದೆ. ನೀವು ಅಂದು ಕೊಂಡಿರಬಹುದು ನಮಗೆ ಚುನಾವಣೆಗೆ ಹೋಗುವುದಕ್ಕೆ ಇಷ್ಟ ಇಲ್ಲ ಎಂದು. ಹಾಗೆ ಆ ಪ್ರಶ್ನೆ ಏನೂ ಇಲ್ಲ. ನೀವು ಬೇಕಾದರೆ ಒಂದು ಸಮಯ ಕೊಡಿ ಒಂದು ತಿಂಗಳು ಹೆಚ್ಚು ಕಡಿಮೆ ಮಾಡುವುದರಿಂದ ಲಾಭ-ನಷ್ಟ ಏನೂ ಬರುವುದಿಲ್ಲ. ಕ್ಷೇತ್ರ ವಿಂಗಡಣೆ ವಸ್ತುನಿಷ್ಠವಾಗಿ ಯಾವ ಯಾವ ವಿಷಯಗಳನ್ನು ನಾವು ಗ್ರಹಿಸಿಕೊಳ್ಳಬೇಕು, ಅದನ್ನು ಸಂಪೂರ್ಣವಾಗಿ ಗ್ರಹಿಸಿ, ಕೆಲವು ಹಂತದಲ್ಲಿ ತರಬೇಕು. ಅಂತಹದ್ದನ್ನು ನಾವು ಗಮನಿಸಿ, ಯಾವುದಕ್ಕೆ ಒತ್ತು ಕೊಡಬೇಕೊ ಅಷ್ಟಕ್ಕೇನೇ ಒತ್ತಿ ಕೊಟ್ಟು ನಾವು ಮಾಡಬೇಕಾದುದು ನಮ್ಮ ಕರ್ತವ್ಯವಾಗಿದೆ. ಅದಕ್ಕೆ ಹಲವಾರು ಉದಾಹರಣೆಗಳನ್ನು ಕೊಡಬಹುದು, ಪಾನ್ ವೀರಪ್ಪ ಮೊಯಿಲಿಯವರು ಇನ್ನು ಅನೇಕ ಪಕ್ಷಗಳ ನಾಯಕರುಗಳು, ಮಾತನಾಡುವಾಗ ಹೇಳಿದ್ದಾರೆ. ಇಂತಹ ಕೆಲವು ವಿಚಿತ್ರ ಸಂಗತಿಗಳು ಎಷ್ಟೆಷ್ಟು ನಡೆದಿದೆ ಎಂದು ಹೇಳಿದ್ದಾರೆ. ನನ್ನ ಹತ್ತಿರವೂ ಕೂಡ ಅಂತಹ ಉದಾಹರಣೆಗಳು ಇವೆ, ಎಲ್ಲೆಲ್ಲಿ ಏನೇನು ವೈಪರಿತ್ಯಗಳು ನಡೆದುವು ಎಂದು. ನಾಳೆಯ ದಿವಸ ಈ ಪಂಚಾಯಿತಿಗಳು ಸುಸೂತ್ರವಾಗಿ ಕೆಲಸ ನಡೆಸಬೇಕೆಂಬುದು ನಮ್ಮೆಲ್ಲರ ಉದ್ದೇಶ. ಆದರೆ ನೀವು ಸೇರಿಸಿರತಕ್ಕಂಥಾ ಮಂಡಲಗಳಲ್ಲಿ ಕೆಲವು ಎತ್ತು ಏರಿಗೆ ಎಳೆದರೆ, ಕೋಣ ನೀರಿಗೆ ಎಳೆಯಿತು-ಎನ್ನುವ ಗಾದೆಯ ಹಾಗೆ ಇದೆ. ನಾಳೆಯ ದಿವಸ ಎಲ್ಲ ಸೂಪರ್‌ಸೀಡ್ ಮಾಡಿ, ಅಲ್ಲಿ ನಿಮ್ಮ ಸಹಶೀಲ್ದಾರ್ ಮುತ್ತಿತರ ಅಧಿಕಾರಿಗಳನ್ನು ಹಾಕತಕ್ಕಂತಹ ಪರಿಸ್ಥಿತಿಗೆ ನೀವು ಹೋದರೆ ಅದರಿಂದ ಏನೂ ಪ್ರಯೋಜನ ಇಲ್ಲ. ಹಿಂದೆ ನಮ್ಮ ಸಹಕಾರಿ ಸಂಘಗಳ ಕತೆಯೂ ಹೀಗೆ ಆಯಿತು. ಅವುಗಳನ್ನು ವಿಂಗಡಿಸಿ, ಜೋಡಿಸಲಿಕ್ಕೆ ಹೋದವು. ತಮಗೆ ಗೊತ್ತಿರಬೇಕು, ತಮ್ಮ ಭಾಗದಲ್ಲಿ ಸಾಕಷ್ಟು ಇಂತಹ ಉದಾಹರಣೆಗಳು ಇವೆ ನನ್ನ ಪಕ್ಕದ ಕ್ಷೇತ್ರವು ತಮ್ಮದಾಗಿರುವ ಕಾರಣ ಅಲ್ಲಿ ಏನೇನು ಆಗಿದೆ ಎಂಬುದು ನನಗೆ ಸ್ವಲ್ಪ ಗೊತ್ತಿದೆ ಒಳ್ಳೆಒಳ್ಳೆಯ ಸೊಸೈಟಿಗಳನ್ನು ಕೆಟ್ಟಿ ಸೊಸೈಟಿಗಳೊಂದಿಗೆ ಜೋಡಿಸಿ, ಒಟ್ಟಿಗೆ ಮಾಡಿದಾಗ ಪರಿಣಾಮ ಏನಾಯಿತು? ಕೆಟ್ಟ ಸೊಸೈಟಿಗಳಿಗೆ ಏನಾಗಲಿಲ್ಲ ಅದರ ಬದಲು ಒಳ್ಳೆಯ ಸೊಸೈಟಿ ಭಾರಿ ಅಧ್ವಾನವಾಯಿತು. ಮಾನ್ಯ ನಜೀರ್‌ಸಾಬ್‌ರವರು ಸರಕಾರದ ಪರವಾಗಿ ಹೋದ ವಿಧಾನ ಸಭೆಯಲ್ಲಿ ಪ್ರಾತನಾಡಿದಾಗ ಈ ವಿಚಾರದಲ್ಲಿ ಶಾಸಕರನ್ನೆಲ್ಲಾ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇನೆ. ಹೀಗೆಂದು ಅಧಿಕಾರಿಗಳಿಗೆ ಸೂಚನೆ

ಕೊಟ್ಟಿದ್ದೇನೆ ಎಂದು ಹೇಳಿದರು. ಅಧಿಕಾರಿಗಳು ನಿಮ್ಮನ್ನು ಸಭೆಗೆ ಕರೆಯುತ್ತಾರೆ, ಅಲ್ಲಿ ನಿಮ್ಮ ಸಲಹೆಗಳನ್ನು ಕೊಡಿ. ಅಲ್ಲಿ ಏನಾದರೂ ತೊಂದರೆ ಆದರೆ, ನನ್ನ ಹತ್ತಿರ ಹೇಳಿ ಎಂದು ಹೇಳಿದ್ದಾರೆ. ಎಲ್ಲಾ ಕೆಲಸವನ್ನೂ ನಾವು ಮಾಡಿದ್ದೇವೆ. ಮೊದಲನೇ ಪಂಚಾಯತ್ ಯೂನಿಯನ್ ಜಿಲ್ಲಾಧಿಕಾರಿಯವರು ಏನು ಮಾಡಿದರು ಅಂದರೆ ಸಭೆ ಕರೆದು ನಮಗೆ ಒಂದು ವಿಧವಾದ ಪಟ್ಟಿಯನ್ನು ಕೊಟ್ಟರು. ಅದರಲ್ಲಿ ಎಲ್ಲಾ ಊರುಗಳು ಹೆಸರು ಇತ್ತು. ಜನಸಂಖ್ಯೆ ಎಷ್ಟು ಎಂದು ಇಲ್ಲ, ಒಂದೊಂದಕ್ಕೆ ದೂರ ಎಷ್ಟು ಎಂದು ಇಲ್ಲ. ಹಾಗೆಯೇ ಆ ಪಟ್ಟಿಯಿಂದಾಗಿ ಅವರು ನಮ್ಮ ಕಡೆಯಿಂದ ಏನು ನಿರೀಕ್ಷೆ ಮಾಡುತ್ತಾರೆ ಎಂದು ಕೂಡ ನಮಗೆ ಹೇಳಲಿಲ್ಲ.

೬-೦೦ ಪಿ ಎಂ.

ಬರೇ ಒಂದು ಗ್ರಾಮದ ಪಟ್ಟಿಯನ್ನು ಕೊಟ್ಟು ಬಿಟ್ಟರೆ ನಾವು ಏನು ಮಾಡಬೇಕು ? ಏನು ಮಾಡೋಣ ? ಆ ರೀತಿ ಪಟ್ಟಿ ಕೊಟ್ಟರೆ ಆಗುವುದಿಲ್ಲ. ಆ ಪಟ್ಟಿಯು ಜೊತೆಯಲ್ಲೇ ಗ್ರಾಮಗಳ ಜನಸಂಖ್ಯೆ ಎಷ್ಟು ಇರತ್ತು ಅಲ್ಲಿಯ ಜನಸಂಖ್ಯೆಯ ವಿಂಗಡನೆಯನ್ನೂ ಸಹ ಕೊಡಬೇಕು. ಇರತ್ತು ಜೊತೆಗೆ ಹೆಂಗಸರು ಎಷ್ಟು ಇರತ್ತು ಗಂಡಸರು ಎಷ್ಟು ಇರತ್ತು ಯಾವ ಯಾವ ವರ್ಗಕ್ಕೆ ಸೇರಿದ ಜನಾಂಗ ಎಷ್ಟು ಇರತ್ತು ಪರಿಶಿಷ್ಟ ಜಾತಿ ಇರತ್ತು ಪರಿಶಿಷ್ಟ ವರ್ಗಗಳಿಗೆ ಸೇರಿದ ಜನಾಂಗ ಎಷ್ಟಿದೆ ಎನ್ನುವ ವಿವರ ಗಳನ್ನು ನಮಗೆ ಕೊಡಬೇಕು, ಇದಲ್ಲದೇ ಒಂದೊಂದು ಗ್ರಾಮಕ್ಕೆ ಇದು ಎಷ್ಟು ದೂರವಿದೆ ? ಎಷ್ಟು ದೂರ ಕೊಡಬೇಕು. ಎಂಬುದರ ಬಗ್ಗೆ ಒಂದು ನಕ್ಷೆಯನ್ನು ಕೊಟ್ಟರೆ ಮಾತ್ರ ಆಗ ನಾವು ಈ ಸಮಸ್ಯೆಯನ್ನು ಬಗೆ ಹರಿಸಬಹುದು. ಅದು ಬಿಟ್ಟು ಬರೀ ಖಾಲಿ ಜಾಗ ತೋರಿಸಿದರೆ ನಾವು ಏನು ಮಾಡಬೇಕು ? ಏನು ಬೇಕಾದರೂ ಮಾಡಬಹುದು. ಸರಿಯಾದ ಸ್ಥಳವನ್ನು ಗುರುತಿಸುವುದಕ್ಕಾಗುವುದಿಲ್ಲ. ಆದ್ದರಿಂದ ನಾವು ಹೇಳಿದ ವಿಚಾರವನ್ನೆಲ್ಲ ಅವರು ನಮಗೆ ಒದಗಿಸಿ ಕೊಡಬೇಕು, ನಿಮ್ಮ ಕೈಕೆಳಗೆ ಇಲಾಖೆಗಳು ಇರುತ್ತವೆ ಆ ವಿವರವನ್ನೆಲ್ಲಾ ಒದಗಿಸಿ ಕೊಡಿ, ಎಂದು ಕೇಳಿದಾಗ ಒದಗಿಸಿಕೊಡುತ್ತೇವೆ. ಮುಂದೆ ಇನ್ನೊಂದು ಸಭೆ ಕರೆಯುತ್ತೇವೆ ಎಂದು ಹೇಳಿದರು. ಆ ನಂತರ ಒಂದು ಸಭೆಯನ್ನು ಕರೆದಾಗ ಅಲ್ಲಿ ಬರೀ ಜನಸಂಖ್ಯೆಯ ಪಟ್ಟಿಯನ್ನು ಕೊಟ್ಟರು ಹಿಂಗಿರುವಂತೆ ನೀವು ಗ್ರೂಪ್ ನಂತೆ ಆದರೆ ಈ ಮಂಡಲ್ ಪಂಚಾಯತ್ ಅನ್ನು ಯಾರೂ ಹಿಡಿತದಲ್ಲಿ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಅದಕ್ಕೆ ಸರಿಯಾದ ಒಂದು ಗ್ರೂಪ್ ಮಾಡಬೇಕು. ನೀವು ಯಾವುದೋ ಒಂದು ಕೇಂದ್ರವನ್ನು ಮನಸ್ಸಿನಲ್ಲೇ ಕಲ್ಪಿಸಿಕೊಂಡರೆ. ಮನಸ್ಸಿನಲ್ಲಿ ಗುರುತಿಸಿಕೊಂಡು ಇದನ್ನು ಸರ್ಕಲ್ ಮಾಡಬೇಕೆಂದು ಹೇಳಿದರೆ, ಆ ಸರ್ಕಲ್ ಅನ್ನು ಹೇಗೆ ಅಳೆಯುವುದಕ್ಕೆ ಸಾಧ್ಯವಾಗುತ್ತದೆ ? ನೀವು ಮನಸ್ಸಿನಲ್ಲಿ ಹಾಗೆ ಗುರುತಿಸಿಕೊಂಡ ಮಾತ್ರಕ್ಕೆ ಈ ಮಂಡಲ್ ಪಂಚಾಯಿತಿಗೆ ಗ್ರೂಪ್ ಅನ್ನುವುದನ್ನು ಸಜೆಸ್ಟ್ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಈ ಕೇಂದ್ರವನ್ನು ಬದಲಾವಣೆ ಮಾಡಿದರೆ ಒಳ್ಳೆಯದು. ಇಲ್ಲದೇ ಹೋದರೆ ನಾವು ಇದರ ಬಗ್ಗೆ ಸಲಹೆ ಕೊಡುವುದು ಶುದ್ಧಾಂಗ ತಪ್ಪಾಗುತ್ತದೆ. ಅಲ್ಲದೆ ತಲೆ ಇಲ್ಲದ ಸಲಹೆಯಾಗುತ್ತದೆ. ಈ ಮಂಡಲ ಪಂಚಾಯಿತಿ ಕೇಂದ್ರದ ಬಗ್ಗೆ ನಾವು ಕೆಲವು ವಿಷಯಗಳನ್ನು ಹೇಳುವುದಕ್ಕೆ ಒಂದು ಅವಕಾಶ ಮಾಡಿಕೊಡಿ, ಅವಾಗ ಹೇಳೋಣ. ಅದು ಬಿಟ್ಟು ಇದನ್ನು ತಾಂತ್ರಿಕವನ್ನಾಗಿ ಮಾಡಿ ಯಾವುದೋ ಕೇಂದ್ರವನ್ನಾಗಿ ಮಾಡಿದರೆ ಆಗುವುದಿಲ್ಲ. ಇದನ್ನೆಲ್ಲಾ ಚರ್ಚಿಸುವುದಕ್ಕೋಸ್ಕರವಾಗಿಯೇ ಈ ಸದನದ ಒಂದು ಸಮಿತಿಯನ್ನು ರಚನೆ ಮಾಡಿ ಎಂದು ಹೇಳಿದ್ದೆವು ಅದು ಅಲ್ಲಿಗೇ ನಿಂತು ಹೋಯಿತು. ಅನಂತರ ನಿಮ್ಮನ್ನು ಯಾರೂ ಏನೂ ಕೇಳಲಿಲ್ಲ. ಇದರ ಬಗ್ಗೆ ಜ್ವಾಲಾಮುಖಿ ಪೇಪರ್‌ನ ಒಬ್ಬ ಸತ್ಯಅನ್ವೇಷಣೆ ಅವರು 'ಕ್ಯಾರೆ' ಅಂತ ಬರೆದಿದ್ದಾರೆ. ಆ 'ಕ್ಯಾರೆ'ಯನ್ನು ಯಾವ ತಾಸೀಲ್ದಾರರೂ ಕೇಳಲಿಲ್ಲ, ಯಾವ ಶಿರಸ್ತೇದಾರರೂ ಕೇಳಲಿಲ್ಲ. ಈಗ ನಿಮಗೆ ನನ್ನ ಕ್ಷೇತ್ರದ ಬಗ್ಗೆನೇ ಒಂದು ಉದಾಹರಣೆ ಹೇಳುತ್ತೇನೆ. ನನ್ನ ಕ್ಷೇತ್ರದ ಒಂದು ಭಾಗ ನರಸಿಂಹರಾಜಪುರದ ಕಡೆಗೆ ಸೇರುತ್ತದೆ, ಇನ್ನೊಂದು ಭಾಗ ತೀರ್ಥಹಳ್ಳಿ ಕಡೆಗೆ ಸೇರುತ್ತದೆ. ಇವೆರಡನ್ನೂ ಹೊಂದಾಣಿಕೆ ಮಾಡಬೇಕು. ಇದರಿಂದ ಜನಸಂಖ್ಯೆ ಜಾಸ್ತಿಯಾಗುತ್ತದೆ. ಇದರ ವಿಸ್ತೀರ್ಣದ ಕಡೆಗೆ ಗಮನಕೊಡಬೇಕು ಎಂದು ಹೇಳಿದರೂ ಸಹ ಗಮನ ಕೊಟ್ಟಿಲ್ಲ. ಆದುದರಿಂದ ನಾನು ಮಲೆನಾಡಿನ ವಿಶ್ಲೇಷಣೆ ಬಗ್ಗೆ ಕೊಟ್ಟಿದ್ದರೂ ಅದನ್ನು ಮಾಡಲಿಕ್ಕೆ ಹೋಗಿಲ್ಲ. ಇದರ ಬಗ್ಗೆ ಗಮನ ಕೊಡುತ್ತಾರೆಂದು ತಿಳಿದಿದ್ದೆ, ಆ ಜಿಲ್ಲಾಧಿಕಾರಿಗಳೂ ಇದನ್ನು ಮಾಡಲಿಲ್ಲ. ಅವರು ಇದನ್ನು ಮಾಡುತ್ತಾರೆಂದು ಒಪ್ಪಿಕೊಂಡಿದ್ದರೂ, ಕೂಡ ಅದನ್ನು ಯಾರೂ ಮಾಡಲಿಲ್ಲ. ಕೊನೆಗೆ ಏನು ಮಾಡಿದ್ದಾರೆ

ಎಂದರೆ ನಮ್ಮ ಮಲೆನಾಡಿನ ವಿಚಾರ ಮರೆತು ಅವರ ಇಷ್ಟಬಂದ ಹಾಗೆ ಮಾಡಿದ್ದಾರೆ. ಆ ಕ್ಷೇತ್ರ ವಿಂಗಡಣೆಗೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ನಾವು ಕೇಂದ್ರವನ್ನು ೧೦ ಮಾಡಬೇಕೆಂದು ಹೇಳಿದ್ದೆವು ಆದರೆ ಅವರು ೯ ಮಾಡಿದ್ದಾರೆ. ಆದಕ್ಕೋಸ್ಕರವಾಗಿ ನಾನು ಹೇಳುವುದು ಇಲ್ಲಿ ಇಂತಹ ಬೃಹಸ್ಪತಿಗಳು ಇದ್ದಾರೆಂದು ನೀವು ಅಧಿಕಾರಿಗಳಿಗೆ ಈ ಬಗ್ಗೆ ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. ಅದರಿಂದ ಅವರು ನಿಸ್ಸಹಾಯಕರಾಗಿದ್ದಾರೆ. ಆ ಅಧಿಕಾರಿಗಳು ಏನು ಹೇಳುತ್ತಾರೆಂದರೆ ನಮಗೆ ಫಳಿಗೆ ಫಳಿಗೆಗೊಂದು ಸರ್ಕ್ಯುಲರ್ ಬರುತ್ತದೆ. ಅಲ್ಲದೆ ಅವರು ಬಾಯಿ ಮಾತಿನ ಮೂಲಕ ತಿಳುವಳಿಕೆ ಕೊಡುತ್ತಾರೆ. ಆದುದರಿಂದ ನಾವು ಏನೂ ಹೇಳುವುದಕ್ಕೆ ಸಾಧ್ಯವಿಲ್ಲ ಎಂದರು. ಇದನ್ನು ಜವಾಬ್ದಾರಿ ಇರತಕ್ಕಂಥಾ, ಪ್ರಮಾಣಿಕತೆ ಇರತಕ್ಕಂಥ ಅಧಿಕಾರಿಗಳು ಹೇಳಿದ್ದಾರೆ. ಈ ಬಗ್ಗೆ ನನ್ನ ಪಾದವನ್ನು ಪುಷ್ಟೀಕರಿಸಿ ಹೇಳುತ್ತಾನಿಲ್ಲ, ಇರುವ ವಿಚಾರವನ್ನು ಹೇಳಿದ್ದೇನೆ. ಅಧಿಕಾರಿಗಳಿಗೆ ಸಂಪೂರ್ಣವಾಗಿ ಸ್ವತಂತ್ರ ಕೊಟ್ಟಿದ್ದರೆ ಅವರು ಜನ ಕೇಳಿದಂತೆ ಮಾಡುತ್ತಾ ಇದ್ದರು. ಮುಖ್ಯವಾಗಿ ಹೇಳಬೇಕಾದರೆ ಯಾರಿಗೆ ಈ ಪ್ರಜಾಪ್ರಭುತ್ವವನ್ನು ಒದಗಿಸಬೇಕೋ ಅಂಥಾವರಿಗೆ ಈ ಬಗ್ಗೆ ಒಂದು ಸರಿಯಾದ ಗ್ರೂಪ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದರೆ ಚೆನ್ನಾಗಿತ್ತು. ಈ ಬಗ್ಗೆ ಅವರು ರೆಪ್ರೆಸೆಂಟೇಷನ್ ಎಲ್ಲ ಕೊಟ್ಟಿದ್ದರೂ ಸಹ ಅದನ್ನು ಕಸದ ಬುಟ್ಟಿಗೆ ಹಾಕಿದ್ದಾರೆ ಎಂದು ಜನ ಹೇಳುತ್ತಾರೆ. ಅವರು ಈ ಬಗ್ಗೆ ಸರಿಯಾದ ಗ್ರೂಪ್ ಮಾಡಬೇಕು ಎಂದು ತಿಳಿವಳಿಕೆ ಹೇಳಿದ್ದರೂ ಸಹ ಅದಕ್ಕೆ ನೀವು ಬೆಲೆ ಕೊಟ್ಟಿಲ್ಲ. ಇದರಿಂದ ಈಗ ಒಂದು ಗ್ರೂಪ್‌ಗೆ ದೊಡ್ಡದಾಗಬಹುದು, ಮತ್ತೊಂದು ಗ್ರೂಪ್‌ಗೆ ಚಿಕ್ಕದಾಗಬಹುದು. ಇದನ್ನು ಯೋಚನೆ ಮಾಡಿದಾಗ ಜನರು ತಮ್ಮ ಅಭಿಪ್ರಾಯಕ್ಕೆ ಸರಿಯಾದ ಮನ್ನಣೆ ಇಲ್ಲ ಎಂದು ಹಿಂದಕ್ಕೆ ಹೋಗಂತಿದ್ದಾರೆ. ನಾವು ಎಷ್ಟೇ ಹೇಳಿದರೂ ತಾವು ತಮ್ಮ ಅಭಿಪ್ರಾಯವನ್ನೇ ವ್ಯಕ್ತಪಡಿಸುತ್ತಿದ್ದೇವಿ. ಇದರಿಂದ ಅವರ ಮಾತಿಗೆ ಹೆಚ್ಚು ಪ್ರಾಶಸ್ತ್ಯ ಸಿಕ್ಕಿರ. ಇದರ ಒಟ್ಟು ತಾತ್ಪರ್ಯ ಹೇಳಬೇಕಾದರೆ ಇದರ ಬಗ್ಗೆ ನಾವು ಹೇಳಿದುದರ ಬಗ್ಗೆ ಯಾವುದೂ ಏನೂ ಆಗಿಲ್ಲ. ನೀವು ಪ್ರಜಾಪ್ರಭುತ್ವದ ಬಗ್ಗೆ ದೊಡ್ಡ ದೊಡ್ಡ, ಭಾಷಣ ಮಾಡುತ್ತೀರಿ. ಇದು ಹಳ್ಳಿಯಿಂದ ಹಳ್ಳಿಗೆ, ಗ್ರಾಮದಿಂದ ಗ್ರಾಮಕ್ಕೆ ಇನ್ನೂ ಮುಟ್ಟಿಲ್ಲ. ಇದು ಯಾವರೀತಿಯಲ್ಲಿ ಹೊಂದಾಣಿಕೆ ಆಗಬೇಕೋ ಆ ದಿಶೆಯಲ್ಲಿ ಕೆಲಸ ಮಾಡಿಲ್ಲ, ಇದನ್ನು ಯಶಸ್ವಿ ಮಾಡುವುದರ ಕಡೆ ಇನ್ನೂ ತಾವು ಪ್ರಯತ್ನ ಮಾಡಿಲ್ಲ, ಅಥವಾ ಒಟ್ಟಾಗಿಯಾದರೂ ಸೇರಿ ಇದರ ಬಗ್ಗೆ ಒಂದು ಹೊಸ ಕ್ರಾಂತಿಯನ್ನು ಮಾಡಿ ಯಾರಿಗೆ ಅಧಿಕಾರ ಸಿಕ್ಕಿಲ್ಲವೋ ಅವರಿಗೆ ಅಧಿಕಾರ ಸಿಗುವ ರೀತಿಯಲ್ಲಿ ಕರ್ನಾಟಕದ ಭೂಗೋಳಿಕವನ್ನು ಅನುಸರಿಸಿ ಅದಕ್ಕೆ ಎರಕ ಹಾಕುವಂಥ ಕೆಲಸ ಮಾಡುವುದರ ಕಡೆಗೂ ತಾವು ಧೈರ್ಯವನ್ನೂ ಮಾಡಿಲ್ಲ ಅಲ್ಲದೆ ಯಾವ ಅಧಿಕಾರಿಗಳು ಪ್ರಾಮಾಣಿಕರಾಗಿದ್ದಾರೆ ಅಂಥವರಿಗೆ ಸರಿಯಾಗಿ ಅಧಿಕಾರವನ್ನು ಕೊಟ್ಟು ನಿಮ್ಮ ಮಾತನ್ನೂ ಉಳಿಸಿಕೊಳ್ಳಲಿಲ್ಲ ನಿಮಗೆ ಈ ಸಂದರ್ಭದಲ್ಲಿ ಒಂದು ಮಾತು ಹೇಳಬೇಕಾಗಿರುವುದೇನೆಂದರೆ, ''ಯಥೋ ಭ್ರುಷ್ಟಾಚಾರ. ತಥೋ ಭ್ರುಷ್ಟಾಚಾರ. ನೀವು ಕೊಟ್ಟ ವಚನ ಭ್ರುಷ್ಟಾಚಾರ'' ಆಗಿದೆ ಎಂದು ಹೇಳುತ್ತೇವೆ. ಇದರ ಬಗ್ಗೆ ತಾವು ದಯವಿಟ್ಟು ಹಠ ಮಾಡಬೇಡಿ. ನೀವು ಚುನಾವಣೆಯನ್ನು ಮುಂದಕ್ಕೆ ಹಾಕುವುದಾಗಲಿ ಅಥವಾ ಅದನ್ನು ಕಾಯಬೇಕಾದ ಅಗತ್ಯವಿಲ್ಲ ನಾವು ಇನ್ನು ಎರಡು ವರ್ಷದವರೆಗೆ ಅಧಿಕಾರದಲ್ಲಿರುತ್ತೇವೆ. ನಾವೇ ಇಲ್ಲಿ ಕೂತುಕೊಂಡಿರುತ್ತೇವೆ, ನಾವೇ ಅಧಿಕಾರ ಮಾಡಿಕೊಂಡು ಹೋಗುವ ಎನ್ನುವ ಪ್ರಶ್ನೆ ಬಂದರೆ, ನೀವು ಹೇಗೆ ಕೂತುಕೊಂಡರೂ ಕೂಡ ಅಧಿಕಾರ ಹೋಗುವ ಕಾಲಕ್ಕೆ ಗೂಟ ಹಿಡಿದುಕೊಂಡು ಕೂತುಕೊಂಡರೂ ಅಧಿಕಾರ ಕಿತ್ತುಕೊಂಡು ಹೋಗುತ್ತದೆ. ಇಡೀ ಶಾಸನ ಸಭೆಯಲ್ಲಿ ನಮಗೇ ಬಹುಮತ ಇದೆ ಎಂದು ಕೆಲವು ರಾಜ್ಯಗಳಲ್ಲಿ ಅಧಿಕಾರ ನಡೆಸಿದರು ಆನಂತರ ಅವು ಬಿದ್ದು ಹೋಗಲಿಲ್ಲವೇ ? ನಾನು ಹೇಳುವುದು ಈ ಅಧಿಕಾರ ಎನ್ನುವುದು ಸೊಸೈಟಿಗಳು ಇದ್ದ ಹಾಗೆ ಆಗಬಾರದು. ಹತ್ತಾರು ವರ್ಷಗಳಾದರೂ ಕೂಡ ಇಂಥಾ ಒಂದು ಭಯಾನಕ ಪರಿಸ್ಥಿತಿ ಹುಟ್ಟತಕ್ಕಂಥಾ ಸಂದರ್ಭ ಬರಬಾರದು ಅದಕ್ಕೋಸ್ಕರವಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಈ ಕ್ಷೇತ್ರ ವಿಂಗಡಣೆಯನ್ನು ಸರಿಯಾಗಿ ಮಾಡಬೇಕು. ಈ ಕ್ಷೇತ್ರ ವಿಂಗಡಣೆ ಕೆಲಸ ಈಗ ಸರಿಯಾಗಿ ನಡೆದಿಲ್ಲ. ಪಸ್ತು ನಿಷ್ಪಕ್ಷಿಯಿಂದಲೂ ಸಹ ಈ ಕೆಲಸ ಸರಿಯಾಗಿ ಆಗಿಲ್ಲ, ವೈಜ್ಞಾನಿಕ ರೀತಿಯಲ್ಲಿಯೂ ಇದು ಆಗಿಲ್ಲ. ಅಲ್ಲದೆ ನಾನು ಮೊದಲೇ ಹೇಳಿದ ಹಾಗೆ ಈ ಕ್ಷೇತ್ರ ವಿಂಗಡಣೆ ಬಗ್ಗೆ ಸರಿಯಾಗಿ ಮಾಡುವುದಕ್ಕೆ ಅಧಿಕಾರವನ್ನು ಸ್ವತಂತ್ರವಾಗಿ ಯಾವ ಅಧಿಕಾರಿಯ ಕೈಯಲ್ಲೂ ಕೊಟ್ಟಿಲ್ಲ. ಇದರ ಬಗ್ಗೆ ನಿಮ್ಮ ಸರ್ಕ್ಯುಲರ್ ನೋಡಿದರೆ ದಿನಕ್ಕೊಂದು ತದ್ವಿರುದ್ಧವಾಗಿ ಬರುತ್ತದೆ ಅಲ್ಲದೆ ಆ ಸರ್ಕ್ಯುಲರ್ ಬಂದ ಬಳಿ ತಾಸು ಒಳಗೆ

ವರದಿಯನ್ನು ಕೊಡಬೇಕೆಂಬ ಇನ್‌ಸ್ಟ್ರಕ್ಷನ್ಸ್ ಬರುತ್ತದೆ, ಆ ಅಧಿಕಾರಿ ೨೪ ತಾಸು ಒಳಗೆ ಎಲ್ಲ ವಿವರ ಗಳನ್ನು ಕೊಟ್ಟು ವಾಪಸ್ಸು ಕಳುಹಿಸಬೇಕು ಎಂದರೆ ಹೇಗೆ ಸಾಧ್ಯವಾಗುತ್ತದೆ ಅವನೇನು ದೇವರೇ ೨೪ ತಾಸುಗಳಲ್ಲಿ ಎಲ್ಲವನ್ನೂ ಮಾಡಲಿಕ್ಕೆ ? ನೇವರ ಕೈಯಲ್ಲೂ ಸಹ ಆಗದೆ ಇದ್ದಂಥ ಕೆಲಸವನ್ನು ಜಿಲ್ಲಾಧಿಕಾರಿಯವರು ಮಾಡಬೇಕು ಎಂದರೆ ಹೇಗೆ ? ಈ ಆಡ್‌ಹಾಕ್‌ನ್ನು ವಸ್ತುನಿಷ್ಠೆಯಾಗಿ ಮಾಡ ಬೇಕು ಸಾಂಸ್ಕೃತಿಕವಾಗಿ ಕೂಡ ಲೋಪ ಇಲ್ಲದೆ ಮಾಡಬೇಕು. ಕ್ಷೇತ್ರ ವಿಂಗಡಣೆ ಬಗ್ಗೆ ಕಾಲಕಾಲಕ್ಕೆ ಅದರಲ್ಲಿ ಏನಾದರೂ ಲೋಪದೋಷಗಳು ಇದ್ದರೆ ಅದನ್ನು ಪರಿಶೀಲಿಸಿ ಸರಿಪಡಿಸುವ ಬಗ್ಗೆ ನಿಮ್ಮ ಕಾನೂನಿನಲ್ಲಿ ಒಂದು ವಿಧಿಯನ್ನು ಸೃಷ್ಟಿ ಮಾಡಿ ಇಟ್ಟಿದ್ದರೆ ಚೆನ್ನಾಗಿತ್ತು. ಈವೊತ್ತು ಎಲ್ಲ ಅಧಿಕಾರ ವನ್ನೂ ಸರ್ಕಾರ ತೆಗೆದುಕೊಂಡಿದೆ. ಇದರ ಅಧಿಕಾರವನ್ನು ಸರಿಯಾಗಿ ಅಧಿಕಾರಿಗಳಿಗೆ ಕೊಟ್ಟಿದ್ದರೆ ಅವರು ಕ್ಷೇತ್ರಗಳನ್ನು ಸರಿಯಾಗಿ ಗುರುತಿಸಿ ಲೋಪದೋಷಗಳು ಇದ್ದರೆ ಸರಿಪಡಿಸುವುದಕ್ಕೆ ಸಾಧ್ಯ ವಾಗುತ್ತಿತ್ತು. ತಪ್ಪಿಗೆ ಹೇಳಬೇಕಾದರೆ ಈವೊತ್ತು ಶಾಸನ ಸಭೆಗಳ ಕ್ಷೇತ್ರಗಳನ್ನು ಗುರುತಿಸುವುದಕ್ಕೆ ಲೋಕಸಭಾ ಕ್ಷೇತ್ರಗಳನ್ನು ಗುರುತಿಸುವುದಕ್ಕೆ ಲೋಕಸಭಾದಸ್ಯ ಸದಸ್ಯರ ಒಂದು ಸಮಿತಿ ಏನು ಮಾಡಿದ್ದಾರೆ ಅದೇರೀತಿ ಈ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಕ್ಷೇತ್ರಗಳನ್ನು ಗುರುತಿಸುವುದಕ್ಕೆ ಸದನದ ಒಂದು ಸಮಿತಿಯನ್ನು ಮಾಡಿದರೆ ಅದರಿಂದ ಪ್ರತಿಫಲ ಬರುತ್ತದೆ ಮತ್ತು ನಿಮ್ಮ ಉದ್ದೇಶವೂ ಸಫಲವಾಗುತ್ತದೆ. ಅವರು ಯಾವ ಒಂದು ನಿರ್ಣಯ ಇದರ ಬಗ್ಗೆ ಮಾಡುತ್ತಾರೆ ಅದನ್ನು ಎಲ್ಲರೂ ಒಪ್ಪುತ್ತಾರೆ. ಮತ್ತೆ ಯಾರೂ ಕೂಡ ಇದರ ಬಗ್ಗೆ ಒಂದು ಚಕಾರ' ಶಬ್ದವನ್ನೂ ಕೂಡ ಮಾಡುವುದಿಲ್ಲ. ಹಾಗೂ ಅದನ್ನು ಮಾನ್ಯ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈವೊತ್ತಿನ ಪರಿಸ್ಥಿತಿಯಲ್ಲಿ ನೀವು ಮಾಡಿರತಕ್ಕಂಥದ್ದರ ಬಗ್ಗೆ ಜನರು ಮಾನ್ಯ ಮಾಡುವುದಕ್ಕೆ ಸಿದ್ಧರಿಲ್ಲ ಏತಕ್ಕೆಂದರೆ ನಿಮ್ಮ ಚುನಾವಣೆಯ ಕ್ಷೇತ್ರದ ವಿಂಗಡಣೆಯೇ ಬೇರೆಯಾಗಿದೆ. ಈ ಚುನಾವಣೆ ಯಾವ ಒಂದು ಮಹತ್ವದ ಮೇಲೆ ನಡೆಯಬೇಕೊ ಅನ್ನೇ ಬಿಟ್ಟಿರುವುದರಿಂದ ಹಾಗೂ ಈ ಕ್ಷೇತ್ರ ವಿಂಗಡಣೆ ಸರಿಯಾಗಿ ಆಗದೇ ಇರುವುದರಿಂದ ಜನಗಳು ನಿಮಗೆ ಯಾವ ರೀತಿಯಾಗಿ ಬೆಂಬಲ ಕೊಡಬೇಕೋ ಆ ರೀತಿಯಾಗಿ ಬೆಂಬಲ ಕೊಡುವುದಿಲ್ಲ, ಇದರಿಂದ ಬಹಳ ನಷ್ಟವಾಗುತ್ತದೆ ಈಗ ಏನು ಒಂದು ಕ್ಷಲ್ಲಕ ವಾತಾವರಣ ನಿರ್ಮಾಣ ಮಾಡಿದ್ದೀರಿ ಇದನ್ನು ನಾವು ಸರಿಪಡಿಸುವುದಕ್ಕೆ ಇನ್ನೂ ಆಗಿಲ್ಲ. ಇದಕ್ಕೆ ಈಗಲಾದರೂ ಬೆಂಬಲ ಕೊಟ್ಟು. ಇದಕ್ಕೆ ಒಂದು ಸಾಂಸ್ಕೃತಿಕ ರೂಪವನ್ನು ಕೊಟ್ಟು, ಒಂದು ಯೋಗ್ಯತೀತವಾದ ರೂಪವನ್ನು ಕೊಟ್ಟು ಈ ಸದನದ ಒಂದು ಸಮಿತಿಗೆ ಇದನ್ನು ಒಪ್ಪಿಸಿ. ಇದಕ್ಕೆ ಒಂದೆರಡು ತಿಂಗಳು ಅವಕಾಶ ಕೊಟ್ಟರೆ ನಿಮಗೇನೂ ಆಕಾಶ ಕಳಚಿ ಬೀಳುವುದಿಲ್ಲ. ಈಗಿರುವ ಹಾಗೆ ಚುನಾವಣೆ ಮಾಡಿದರೆ ಇದರ ಬಗ್ಗೆ ಲೋಪದೋಷಗಳು ಏನಾದರೂ ಬಂದರೆ ಇದಕ್ಕೆ ನೀವೇ ಕಾರಣ ರಾಗುತ್ತೀರಿ. ಆದರೆ ಈ ಚುನಾವಣೆಯನ್ನು ನಾವು ಎದುರಿಸುವುದಕ್ಕೆ ಯಾವತ್ತೂ ಸಿದ್ಧರಾಗಿದ್ದೇವೆ. ಈ ಚುನಾವಣೆಯನ್ನು ಈಗಲೇ ಮಾಡಿದರೆ ನಾವು ಎದುರಿಸುವುದಕ್ಕಾಗುವುದಿಲ್ಲ ಎಂದು ನೀವು ತಿಳಿದಿದ್ದರೆ ಅದು ನಿಮಗೆ ಭ್ರಮನಿರಸನವಾದೀತು. ಆಲ್ಲದೆ ಈಗಲೇ ಚುನಾವಣೆ ಮಾಡಿದರೆ ನಮಗೆ ಅನುಕೂಲ ವಾದೀತು ಅನ್ನುವ ತರಹದಲ್ಲಿ ತಾವು ಮಾತನಾಡಿದರೆ ಇದರ ಬಗ್ಗೆ ತಮಗೆ ಬುದ್ಧಿವಂತಿಕೆ ಎಷ್ಟು ಇದೆಯೋ ಅಷ್ಟೇ ಬುದ್ಧಿವಂತಿಕೆ ನಮಗೂ ಇದೆ. ಆದ್ದರಿಂದ ಈಗಲಾದರೂ ತಾವು ನಿಮಗೇ ಹೆಚ್ಚು ಬುದ್ಧಿವಂತಿಕೆಯಿದೆ ಎನ್ನುವುದನ್ನು ತೋರಿಸದೆ ನಿಮ್ಮ ಪ್ರಾಮಾಣಿಕತೆಯನ್ನು ಹೆಚ್ಚು ತೋರಿಸಿ ನಾವು ಕೊಟ್ಟ ಸಲಹೆಗಳನ್ನು ತಮ್ಮ ಗಮನಕ್ಕೆ ತೆಗೆದುಕೊಂಡು ಕೆಲಸ ಮಾಡಿದರೆ ಆವಾಗ ನಿಮ್ಮನ್ನು ಮೆಚ್ಚುತ್ತೇವೆ. ನೀವು ಪ್ರಾಮಾಣಿಕವಾಗಿ, ಇದಕ್ಕೆ ಒಂದು ಶಾಶ್ವತವಾದಂಥ ರೀತಿಯಲ್ಲಿ ಮಾಡಬೇಕು ಎನ್ನುವ ಅಭಿಲಾಷೆಯಿದ್ದರೆ ದಯವಿಟ್ಟು ನಾವು ಏನು ಹೇಳಿದ್ದೇವೆ ಅದಕ್ಕೆ ಮಾನ್ಯತೆ ಕೊಡಿ, ಆಲೋಚನೆ ಮಾಡಿ, ಕಾನೂನು ಪ್ರಕಾರ ನಿರ್ಧಾರ ಮಾಡಿ ಕ್ಷೇತ್ರ ವಿಂಗಡಣೆಯನ್ನು ವಸ್ತುನಿಷ್ಠವಾಗಿ, ವೈಜ್ಞಾನಿಕವಾಗಿ ಜನಗಳ ಅಪೇಕ್ಷೆಯಂತೆ ೧೦೦ಕ್ಕೆ ೯೦ ರಷ್ಟು ಹೊಂದಾಣಿಕೆಯಾಗುವಂಥ ರೀತಿಯಲ್ಲಿ ಮಾಡಬೇಕು. ಸರ್ವಸಮ್ಮತವಾದಂಥ ರೀತಿಯಲ್ಲಿ ಮಾಡಬೇಕು. ೧೦೦ಕ್ಕೆ ೧೦೦ ರಷ್ಟು ಪರಿಪೂರ್ಣ ಗೊಳಿಸುವುದಕ್ಕೆ ಸಾಧ್ಯ ಎಂದು ಒತ್ತಾಯ ಮಾಡುವುದಿಲ್ಲ. ಲೋಪದೋಷಗಳಿರುತ್ತವೆ ಆದರೆ ಬಹುಪಾಲು ಸರಿ ಮಾಡಬೇಕು ಎಂದು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಆರ್. ನೀಲಕಂಠಪ್ಪ. (ತರೀಕೆರೆ).—ಮಾನ್ಯ ಅಧ್ಯಕ್ಷರೆ, ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ಗಳ ಕ್ಷೇತ್ರ ವಿಂಗಡಣೆ ಮತ್ತು ಅದರಲ್ಲಿ ಆಗಿರತಕ್ಕಂಥ ಕ್ರಾಂತಿಕಾರಿ ಬದಲಾವಣೆ

ನಿಜವಾಗಿಯೂ ಸ್ವಾಗತಾರ್ಹವಾದುದು. ಆಕಸ್ಮಿಕವಾಗಿ ಈ ಕ್ಷೇತ್ರ ವಿಂಗಡಣೆಯಲ್ಲಿ ಅಲ್ಪ ಸ್ವಲ್ಪ ಬದಲಾವಣೆಯಾಗಿದೆ ಎಂದು ಹೇಳುತ್ತಾರೆ. ವಿರೋಧಪಕ್ಷದವರು, ''ಇದು ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಹುಡುಕಿದ'' ಎನ್ನುವಂಥ ರೀತಿ ಇವರ ವಾದವಾಗಿದೆ. ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ಒಲ್ಲದ ಗಂಡ.....

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.—ಆ ಕಡೆಯವರು ಮಾತನಾಡುವಾಗ ನಾವು ಸುಮ್ಮನೆ ಕುಳಿತಿದ್ದೆವು. ಈಗ ನಮ್ಮ ಕಡೆಯವರು ಮಾತನಾಡುವಾಗ ಅವರು ಈ ರೀತಿ ಮಾಡಿದರೆ ಹೇಗೆ?

ಶ್ರೀ ಪಟ್ಟವಂಕಿ ರತ್ನಾಕರ್.—ಮಾನ್ಯ ನಾರಾಯಣ ಕುಮಾರ್‌ರವರಿಗೆ ಜಿಲ್ಲಾ ಪರಿಷತ್ತು ಅರ್ಥವಾಗುವುದಿಲ್ಲ.

ಛೇರ್ಮನ್.—ನೀವು ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ಎ. ಉಮಂರಬ್ಬ.—ಅವರಿಗೆ ಒಲ್ಲದ ಗಂಡನಿಗೆ ಕಲ್ಲಿನಲ್ಲಿ ಮೊಸರನ್ನು ಹುಡುಕಿದಂತಾಗಿದೆ.

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.— ಒಬ್ಬರೂ ನಿಮಗೆ ಓಟ್ ಕೊಡುವುದಿಲ್ಲ.

ಶ್ರೀ ಪಟ್ಟವಂಕಿ ರತ್ನಾಕರ್.—ಜಿಲ್ಲಾ ಪರಿಷತ್ತು ಅಂದರೆ ನ್ಯಾಯಬೆಲೆ ಅಂಗಡಿ ಎಂದು ತಿಳಿದುಕೊಂಡಿದ್ದಾರಾ ಅವರು. ದಯವಿಟ್ಟು ಅವರಿಗೆ ಸ್ವಲ್ಪ ಹೇಳಿ.

ಶ್ರೀ ಜಿ. ನಾರಾಯಣ ಕುಮಾರ್.— ನಿಮ್ಮದು ಮುಗಿದ ಕತೆಯಾಗಿದೆ, ಏನೇನೋ ಮಾತನಾಡುತ್ತೀರಿ.

ಶ್ರೀ ಬಿ.ಆರ್. ನೀಲಕಂಠಪ್ಪ —ಮಾನ್ಯ ಅಧ್ಯಕ್ಷರೆ, ನಿಜವಾಗಿ ಇವರಿಗೆ ಗ್ರಾಮೀಣ.....

ಛೇರ್ಮನ್.—ತಾವು ಸ್ವಲ್ಪ ಸರಿಯಾಗಿ ಮಾತನಾಡಿ. ಸಬ್ಜೆಕ್ಟ್‌ಗೆ ಹೋಗಿ.

ಶ್ರೀ ಬಿ ಆರ್. ನೀಲಕಂಠಪ್ಪ.—ಗ್ರಾಮೀಣ ಜನರ ಬಗ್ಗೆ, ಹಿಂದುಳಿದವರ ಬಗ್ಗೆ ಯಾರಿಗಾದರೂ ಕಿಂಚಿತ್ ಅನುಕಂಪ ಇದ್ದರೆ, ಇದೇನು ಜಿಲ್ಲಾ ಪರಿಷತ್, ಮಂಡಲ್ ಪಂಚಾಯತ್ ಕ್ಷೇತ್ರ ಎಂದು ಇವರು ಕೇಳುತ್ತಾರೆ, ಇದನ್ನು ಮಹಮ್ಮದ್ ಬಿನ್ ತೊಘಲಕ್ ಹಾಗೆ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಹಾಕಿಲ್ಲ, ಅಥವಾ ತರೀಕೆರೆಯನ್ನು, ತೆಗೆದುಕೊಂಡು ಹೋಗಿ ಬೆಂಗಳೂರಿಗೆ ಕೊಟ್ಟಿಲ್ಲ, ಬೆಂಗಳೂರು ತೆಗೆದುಕೊಂಡು ಹೋಗಿ ತರೀಕೆರೆಗೆ ಕೊಟ್ಟಿಲ್ಲ.

(ಗೊಂದಲ)

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಸಭಾಧ್ಯಕ್ಷರೆ, ಅವರಿಗೆ ತಾವು ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಳ್ಳೆಯ ಮಂತ್ರಿಗಳಿಗೆ ಮಹಮದ್ ಬಿನ್ ತೊಘಲಕ್ ಎಂದು ಕರೆದರೆ ಏನು ಹೇಳುವುದು,

ಶ್ರೀ ಜಿ. ನಾರಾಯಣ ಕುಮಾರ್.—ನಿಮ್ಮದು ಇದ್ದದ್ದು ಇದ್ದ ಹಾಗೆ ಹೇಳಿದರೆ ಎದ್ದು ಬಂದಂ ಎದೆಗೆ ಒದ್ದ ಎನ್ನುವ ಕತೆಯಾಗಿದೆ.

ಶ್ರೀ ಬಿ.ಆರ್. ನೀಲಕಂಠಪ್ಪ.—ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳ ಕ್ಷೇತ್ರ ವಿಂಗಡಣೆ ವಿಚಾರ. ಇದು ೧೦೦ಕ್ಕೆ ೧೦೦ ಸರಿಯಾಗಿದೆ ಈ ವಿಚಾರದ ಬಗ್ಗೆ ವಿರೋಧ ಪಕ್ಷಗಳ ಮಹಾನ್‌ಮಣಿಗಳು ಬಹಳ ಕ್ಷುಲ್ಲಕವಾಗಿ ಅಲ್ಲಗಳೆದಿದ್ದಾರೆ. ಇದನ್ನು ಅವರಿಗೇ ಕೊಟ್ಟರೂ ನೂರಕ್ಕೆ ನೂರು ಸರಿಮಾಡುವುದಕ್ಕೆ ಆಗುವುದಿಲ್ಲ. ಅಲ್ಪ ಸ್ವಲ್ಪ ತಪ್ಪಾಗಿರಬಹುದು ಸರಿ ಮಾಡಿ ಎಂದು ಹೇಳಿ. ಮಾನ್ಯ ಸಜೀರ್‌ಸಾಹೇಬರು ಅಥವಾ ಜನತಾ ಸರ್ಕಾರ ಸಾಮಾನ್ಯ ಬಡ ಬೋರೇಗೌಡನಿಗೆ ಅಧಿಕಾರವನ್ನು

ಕೊಡಬೇಕಂ ಎಂದು ಮಾಡಿದ್ದಾರೆ. ೨೫ ಜನ ಮಹಿಳೆಯರಿಗೆ ೧೮ ಭಾಗ ಹಿಂದುಳಿದವರಿಗೆ ಕೊಡಬೇಕಂ ಎಂದು ಮಾಡಿದ್ದಾರೆ. ನನ್ನ ಕ್ಷೇತ್ರದಲ್ಲಿ ೫ ಜಿಲ್ಲಾ ಪರಿಷತ್ ಬಂದು ೫ ಜನರಿಗೆ ಅಧಿಕಾರ ಸಿಗುತ್ತದೆ. ಆದುದರಿಂದ ವಿರೋಧ ಪಕ್ಷದವರು ಹೇಳತಕ್ಕದ್ದು ಸುಳ್ಳು, ಜನರನ್ನು ತಪ್ಪು ದಾರಿಗೆ ಎಳೆಯುವುದಕ್ಕೆ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಬಿ. ಆರ್. ನೀಲಕಂಠಪ್ಪ :—ಮಾನ್ಯ ಅಧ್ಯಕ್ಷರೆ, ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ಗಳ ಕ್ಷೇತ್ರ ವಿಂಗಡಣೆ ಇದು. ಆದರೆ ಚುನಾವಣೆಗೆ ಹೋಗುವ ಕಾಲಕ್ಕೆ ಅಡ್ಡಿ ತಂದರು. ಇವರು ಚುನಾವಣೆಗೆ ಗ್ರಾಮೀಣ ಜನರ ಹತ್ತಿರ ಹೋಗಲಿಕ್ಕೆ ಆಗುವುದಿಲ್ಲ ಎಂದು ಹೆದರಿಕೊಂಡು ಕುಂಟುನೆಪ ಹೇಳಿಕೊಂಡು ಇದ್ದಾರೆ. ಚುನಾವಣೆಯಲ್ಲಿ ಆಶ್ವಾಸನೆ ಕೊಟ್ಟಿದ್ದನ್ನು ಈಡೇರಿಸಲಿಲ್ಲ ಎನ್ನುವ ಹೊಟ್ಟೆಯುರಿಗೋಸ್ಕರ ಜನತೆಯ ಮುಂದೆ ಹೋಗತಕ್ಕ ಬಂಡವಾಳವನ್ನು ಕಾಂಗ್ರೆಸ್‌ನವರು ಕಳೆದುಕೊಂಡಿದ್ದಾರೆ. ಚುನಾವಣೆಯನ್ನು ಮುಂದೂಡಲೇಬೇಕೆಂಬ ದೃಷ್ಟಿಯಿಂದ ಹೇಳುತ್ತಿದ್ದಾರೆ. ಇವರಿಗೆ ಜನಗಳ ಹತ್ತಿರ ಹೋಗಲಿಕ್ಕೆ ಆಗುತ್ತಾ ಇಲ್ಲ. ಆದ್ದರಿಂದ ಇವರು ಕುಂಟುನೆಪ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಜೆ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೆ, ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಜನರನ್ನು ತಪ್ಪುದಾರಿಗೆ ಎಳೆಯುವುದಕ್ಕೋಸ್ಕರ ಹೇಳುತ್ತಿದ್ದಾರೆ:

ಶ್ರೀ ಜೆ.ಎಸ್. ಶಿವನಂಜಪ್ಪ.—ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ಬಿ.ಆರ್. ನೀಲಕಂಠಪ್ಪ.—ನಾನು ಮಾತನಾಡುತ್ತಾ ಇದ್ದೇನೆ, ಇದರಲ್ಲಿ ಪಾಯಿಂಟ್ ಆಫ ಆರ್ಡರ್ ಬರುವುದಿಲ್ಲ.

ಛೇರ್ಮನ್.—ಅವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಜೆ. ಎಸ್. ಶಿವನಂಜಪ್ಪ — ಮಾನ್ಯ ನೀಲಕಂಠಪ್ಪನವರು ಇಂಗ್ಲೀಷ್‌ನಲ್ಲಿ ಭಾಷಣ ಮಾಡುತ್ತಿದ್ದಾರೋ, ಅಥವಾ ಕನ್ನಡದಲ್ಲಿ ಭಾಷಣ ಮಾಡುತ್ತಿದ್ದಾರೋ ಅಥವಾ ಉರ್ದುವಿನಲ್ಲಿ ಮಾಡುತ್ತಿದ್ದಾರೋ, ನಮಗೆ ಅರ್ಥವಾಗಲಿಲ್ಲ.

ಶ್ರೀ ಬಿ ಆರ್. ನೀಲಕಂಠಪ್ಪ.—ಚುನಾವಣೆಗೆ ಹೋಗುವ ಕಾಲದಲ್ಲಿ ಬಂಡವಾಳವಿಲ್ಲದ ವಿರೋಧ ಪಕ್ಷದವರು ಕ್ಷೇತ್ರ ವಿಂಗಡಣೆ ಬಗ್ಗೆ ಹೇಳುತ್ತಿದ್ದಾರೆ, ಜನತಾ ಪಕ್ಷದವರು ಪೊಳ್ಳು ಘೋಷಣೆ ಹೇಳಿಕೊಂಡು ಜನರನ್ನು ತಪ್ಪು ದಾರಿಗೆ ಎಳೆಯುವುದಕ್ಕೋಸ್ಕರ ಇದನ್ನು ತಂದಿದ್ದಾರೆ.

(ಗೊಂದಲ)

ಶ್ರೀ ಡಿ.ಎ. ಚಿನ್ನಪ್ಪ.—ಅವರಿಗೆ ಮಾತನಾಡುವುದಕ್ಕೆ ಬಿಡಿ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ಕ್ಷೇತ್ರ ವಿಂಗಡಣೆ ಸರಿ ಇದೆ. ಹುಲಿ ಎಲ್ಲಿದ್ದರೂ ಮಾಂಸವನ್ನು ತಿನ್ನುತ್ತದೆಯೇ ಹೊರತು ಸೊಪ್ಪನ್ನು ತಿನ್ನುತ್ತದೆಯೇ? ಕ್ಷೇತ್ರ ವಿಂಗಡನೆ ಎಂದು ಹೇಳಿ ಜನರನ್ನು ತಪ್ಪು ದಾರಿಗೆ ಎಳೆಯುವುದಕ್ಕೆ ಅವಕಾಶ ಮಾಡಿಕೊಡಬೇಡಿ. ಇವತ್ತೋ, ನಾಳೆಯೋ, ಇನ್ನು ಒಂದು ತಿಂಗಳೊಳಗೋ ಚುನಾವಣೆಯನ್ನು ಮಾಡುತ್ತಾರೆ. ಆಗ ೧೦೦ಕ್ಕೆ ೨೫ ಜನ ಮಹಿಳೆಯರಿಗೆ, ೧೮ ಪರ್ಸೆಂಟ್ ಹಿಂದುಳಿದವರಿಗೆ ಅಧಿಕಾರ ನೀಡಲು ಅವಕಾಶವಿದೆ. ಆದಷ್ಟು ಬೇಗ ಗ್ರಾಮೀಣ ಜನರಿಗೆ ಅಧಿಕಾರ ಕೊಡಿ ಎಂದು ವಿನಂತಿ ಮಾಡಿಕೊಳ್ಳುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು.)

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಮಂತ್ರಿಗಳು ಈಗ ಉತ್ತರ ಕೊಡಲಿ.

ಶ್ರೀ ಸಿದ್ದರಾಮಯ್ಯ.—ಈಗಾಗಲೇ ಆರೂವರೆ ಗಂಟೆಯಾಗಿದೆ, ನಮ್ಮ ಪಕ್ಷದ ಸದಸ್ಯರೆ ಮಾತನಾಡಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಮಂತ್ರಿಗಳು ನಾಳೆ ಉತ್ತರ ಕೊಡಲಿ.

ಶ್ರೀ ಎಸ್. ಬಂಗಾರಪ್ಪ.—ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಗಿರುವುದರ ಪ್ರಕಾರ ಇವತ್ತು ಮುಗಿಸಬೇಕು.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಕೊಡಲಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—ನಾಳೆ ನಾಡಿದ್ದು ಅಸೆಂಬ್ಲಿ ಮುಂಗಿಯುತ್ತದೆ. ಮಾನ್ಯ ಅಧ್ಯಕ್ಷರೇ, ಕ್ಷೇತ್ರ ವಿಂಗಡಣೆ.....

ಶ್ರೀ ಸಿದ್ದರಾಮಯ್ಯ.—ಮಾನ್ಯ ಮಂತ್ರಿಗಳು ನಾಳೆ ಉತ್ತರ ಕೊಡಲಿ, ಈ ಕಡೆ ಇನ್ನು ಮಾತನಾಡುವ ಸದಸ್ಯರಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳಿಂದ ಉತ್ತರ ಪ್ರಾರಂಭವಾಗಿದೆ. ಪ್ರಾರಂಭವಾದ ಮೇಲೆ.....

ಶ್ರೀ ಸಿದ್ದರಾಮಯ್ಯ.—ಕ್ಷೇತ್ರ ವಿಂಗಡನೆ ಬಗ್ಗೆ ವಿರೋಧ ಪಕ್ಷದ ನಾಯಕರು ಮತ್ತು ಬೇರೆ ಸದಸ್ಯರು ಮಾತನಾಡಿದ್ದಾರೆ. ನಮ್ಮ ಪಕ್ಷದಲ್ಲಿನ ಅನೇಕ ಸದಸ್ಯರು ಕೂಡ ಇದರ ಬಗ್ಗೆ ಮಾತನಾಡಬೇಕೆಂಬ ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆ. ನಾನು ಕೂಡ ಮಾತನಾಡುವವರಲ್ಲಿ ಒಬ್ಬ. ಈಗಾಗಲೇ ಬಹಳ ಕಾಲವಾಗಿದೆ. ನಾಳೆ ಮಾನ್ಯ ಮಂತ್ರಿಗಳು ಉತ್ತರ ಕೊಡುವುದರಿಂದ ಏನು ತೊಂದರೆಯಾಗುವುದಿಲ್ಲ. ನಾಳೆ ಮಾತನಾಡುತ್ತೇವೆ.

ಅಧ್ಯಕ್ಷರು.—ನೀವು ಮಾತನಾಡುವ ಹಾಗಿದ್ದರೆ ಈಗ ಮಾತನಾಡಿ ನಾಳೆ ಸಾಕಷ್ಟು ಬಿಜಿನೆಸ್ ಇದೆ. ಶನಿವಾರಕ್ಕೆ ಹೋದರೂ ಹೋಗಬಹುದು.

ಶ್ರೀ ಸಿದ್ದರಾಮಯ್ಯ.—ಮಂತ್ರಿಗಳು ಉತ್ತರ ಕೊಡಬೇಕು. ಹಾಗೂ ಇನ್ನು ನಾಲ್ಕೈದು ಜನ ಸದಸ್ಯರು ಮಾತನಾಡಬೇಕು ತುಂಬಾ ತಡವಾಗುತ್ತದೆ. ನಾಳೆ ತೆಗೆದುಕೊಳ್ಳಿ.

ಅಧ್ಯಕ್ಷರು.—ನಿಮ್ಮೆಲ್ಲರ ಅಭಿಪ್ರಾಯದಂತೆ, ಬಹುಮತದ ಪ್ರಕಾರ ಹೋಗಬೇಕಾಗುತ್ತದೆ. ಸರ್ವಾನುಮತದಿಂದ ಈ ಸಭೆಯನ್ನು ನಡೆಸಬೇಕಾಗುತ್ತದೆ. ಇವತ್ತು ಮುಗಿಸುವುದು ಒಳ್ಳೆಯದೆಂದು.

ಒಬ್ಬ ಮಾನ್ಯ ಸದಸ್ಯರು.—ನಮಗೆ ಅವಕಾಶ ಮಾಡಿಕೊಡುತ್ತಿಲ್ಲ. ನಮಗೂ ಅವಕಾಶ ಕೊಡಿ. ಈ ತಾರತಮ್ಯ ಏಕೆ?

ಶ್ರೀ ಪ್ರಭಾಕರ್ ರಾಣೆ.—ಈ ಬಗ್ಗೆ ಮೂರ್ನಾಲ್ಕು ದಿವಸದಿಂದ ಚರ್ಚೆಯಾಗಿದೆ. ನಿನ್ನೆಯೇ ಕೊನೆ ಎಂದು ಹೇಳುತ್ತಿದ್ದೀರಿ. ಮಾನ್ಯ ಸಚಿವರು ಈಗ ಉತ್ತರ ಕೊಡುವುದಕ್ಕೆ ಸಿದ್ಧವಾಗಿದ್ದಾರೆ.

(ಗೊಂದಲ)

ಅಧ್ಯಕ್ಷರು.—ನಾಳೆ ರೆಸಲ್ಯೂಷನ್ ಇದೆ. ಆರ್ಮ್ಡ್ ಬಾಟ್ಲಿಂಗ್ ವಿಷಯ ಬಗ್ಗೆ ಚರ್ಚೆ ಇದೆ. ನಿಮಗೆ ಅವಕಾಶ ಕೊಡಬಾರದೆಂದು ಅಲ್ಲ. ಬಹುಮತದಿಂದ, ಸರ್ವಾನುಮತದಿಂದ ಹೋಗಬೇಕಾಗುತ್ತದೆ. ಇದನ್ನು ಆದಷ್ಟು ಮುಗಿಸುವುದು ಒಳ್ಳೆಯದು. ಮಾತನಾಡುವವರಿದ್ದರೆ ಮಾತನಾಡಲಿ.

ಒಬ್ಬ ಮಾನ್ಯ ಸದಸ್ಯರು.—ತಾವು ಇದುವರೆಗೂ ವಿರೋಧ ಪಕ್ಷದವರಿಗೆ ಹೆಚ್ಚಿಗೆ ಕಾಲಾವಕಾಶ ಕೊಟ್ಟಿದ್ದೀರಿ. ನಮಗೂ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಯಾವುದೇ ವಿಷಯವನ್ನು ಡಿಸ್‌ಕಸ್ ಮಾಡುವಾಗ ಈ ಸದನವನ್ನು ಮಂದಿ ಹಾಕ ಬೇಕೆಂಬ ವಿಚಾರ ಇಲ್ಲ. ಇವತ್ತು, ನಾಳೆ ಅಥವಾ ನಾಡಿದ್ದಾಗಲೀ ಆರ್ಮ್‌ಕ್ ಬಾಟ್ಲಿಂಗ್ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುವುದು ನನ್ನ ಜವಾಬ್ದಾರಿ. ಸದನದಲ್ಲಿ ಒಟ್ಟು ಅಭಿಪ್ರಾಯ ಬಂದರೆ ಒಳ್ಳೆಯದು. ಅದಕ್ಕೂ, ಇದಕ್ಕೂ ಅವಕಾಶ ಮಾಡಿಕೊಡುತ್ತೇನೆ. ನಾಳೆ ರೆಸಲ್ಯೂಷನ್ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆ ಕಡೆಯ ಸದಸ್ಯರ ಆತುರವನ್ನು ನೋಡಿದರೆ, ಕ್ಷೇತ್ರ ವಿಂಗಡಣೆಯಲ್ಲಿ ಆ ಕಡೆಯ ಸದಸ್ಯರಿಗೂ ಸಹ ಅನ್ಯಾಯವಾಗಿರಬಹುದೆಂದು ಕಾಣುತ್ತದೆ. ಅವರಿಗೆ ಅವಕಾಶ ಮಾಡಿಕೊಡಿ. ಇದನ್ನು ನಾಳೆ ತೆಗೆದುಕೊಳ್ಳೋಣ.

ಅಧ್ಯಕ್ಷರು.—ಸಭೆಯು ಈಗ ಎದ್ದು ನಾಳೆ ಬೆಳಿಗ್ಗೆ ೧೧-೦೦ ಗಂಟೆಗೆ ಸೇರಲಿದೆ.

(ಸಭೆಯು ಸಂಜೆ ೬ ಗಂಟೆ ೩೦ ನಿಮಿಷಕ್ಕೆ ಮಂಕ್ಕಾಯವಾಗಿ ಮತ್ತೆ ಪುನಃ ನಾಳೆ ಗುರುವಾರ ೨೮ನೇ ಆಗಸ್ಟ್ ೧೯೮೬ರಂದು ಬೆಳಿಗ್ಗೆ ೧೧ ಗಂಟೆಗೆ ಸೇರಲು ನಿಶ್ಚಯಿಸಲಾಯಿತು.)